ಅಚಲ

ಮೇ 1995 ಬೆಲೆ : ರೂ. 2-00

(28)

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ದ್ವೈಮಾಸಿಕ



ಸಂಪುಟ : 11

ಸಂಚಿಕೆ : 2

“ಅಚಲ'' ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನೈದು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚೆಕ್ ಮೂಲಕ ಹಣ ಕಳಿಸುವವರು 20/ ರೂ.ಗಳಿಗೆ ಕಳಿಸಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಲೇಖನ, ಹಣ ಕಳುಹಿಸಬೇಕಾದ ವಿಳಾಸ :–

ಎನ್. ಗಾಯಿತ್ರಿ
ಬಿ-30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
9ನೇ ಕ್ರಾಸ್, ಒಂದನೇ ಫೇಸ್
ವಿಜಯನಗರ 2ನೇ ಹಂತ
ಬೆಂಗಳೂರು-5600 40

ಚಂದಾ ವಿವರ :

ವಾರ್ಷಿಕ ಚಂದಾ	:	ರೂ, 15.00
ಆಜೀವ ಚಂದಾ	:	ರೂ. 150.00
(ಚೆಕ್ ಮೂಲಕ	:	ರೂ. 160.00
ಸಂಸ್ಥೆಗಳಿಗೆ	;	ರೂ, 200.00
ಬಿಡಿ ಪ್ರತಿ	:	ರೂ. 2.00
ವಿಶೇಷ ಪ್ರತಿ	:	ರೂ. 3.50

Printed at Lipi Mudrana,
No. 1, Bugle Rock Road, Bangalore-4.

Published by Dr. G. Ramakrishna on behalf of Jagruthi Mahila Adhyayana Kendra, 26, I Main Road, Vyalikaval, Bangalore-3

Editor : N. Gayathri

ಒಳಗೇನಿದೆ ?

ಸಂಪಾದಕೀಯ

ಸಮಾನತೆಯತ್ತ ಹೆಜ್ಜೆ ಹಾಕಿದ ತೀರ್ಪು

ಮತಾಂತರ ಹೊಂದಿ, ಮತೀಯ ಕಾನೂನಿನ ಲಾಭ ಪಡೆದು ಮದುವೆಯಾದ ಹೆಂಡತಿಯರಿಗೆ ಅನ್ಯಾಯವೆಸಗುವ ಗಂಡಂದಿರ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ಮತಾಂತರ ನಂತರ ತಮ್ಮನ್ನು ತ್ಯಜಿಸಿದ ಗಂಡಂದಿರ ವರ್ತನೆಯ ವಿರುದ್ಧ ನಾಲ್ಕು ಹಿಂದೂ ಮಹಿಳೆಯರು ಹೂಡಿದ್ದ ಮೊಕದ್ದಮೆಯ ಮೇಲೆ ದೇಶದ ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ನೀಡಿದ ತೀರ್ಪು ಸ್ವಾಗತಾರ್ಹ.

"ಒಬ್ಬ ಹಿಂದೂ ಗಂಡ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಎರಡನೇ ಮದುವೆಯಾಗುವುದು ನ್ಯಾಯದ, ಸಮಾನತೆಯ ಹಾಗೂ ಒಳ್ಳೆಯ ಮನಸ್ಸಾಕ್ಷಿಯ ಉಲ್ಲಂಘನೆ. ಇದು ಸ್ವಾಭಾವಿಕ ನ್ಯಾಯದ ಆಧಾರದಲ್ಲಿ ಊರ್ಜಿತವಾಗಲಾರದ ಸಂಗತಿ'' ಎಂದು ನ್ಯಾಯಾಲಯ ಹೇಳಿದೆ. ಧರ್ಮವನ್ನು ಈ ರೀತಿ "ಕೇವಲ ಬಹುಪತ್ನಿತ್ವಕ್ಕಾಗಿ ನಗ್ನ ದುರ್ಬಳಕೆ ನಡೆಸುವುದನ್ನು'' ತೀವ್ರವಾಗಿ ಟೀಕಿಸುತ್ತಾ ಯಾವುದೇ ಧರ್ಮ, ಧಾರ್ಮಿಕ ವಿಕೃತಿಗಳಿಗೆ ಅನುಮತಿ ನೀಡುವುದಿಲ್ಲ ಎಂದಿದೆ. "ಮಾನವ ಹಕ್ಕುಗಳನ್ನು ಹಾಗೂ ಘನತೆಯನ್ನು ಉಲ್ಲಂಘಿಸುವ ಧಾರ್ಮಿಕ ಆಚರಣೆಗಳು ಹಾಗೂ ಅನಿವಾರ್ಯ ನಾಗರೀಕ ಹಾಗೂ ಭೌತಿಕ ಸ್ವಾತಂತ್ರ್ಯವನ್ನು ಪಾವಿತ್ರ್ಯತೆಯ ಹೆಸರಿನಲ್ಲಿ ಉಸಿರುಗಟ್ಟಿಸುವಂತದ್ದು ದಮನದ ಸ್ವಾಯತ್ತತೆಗಾಗಿ ಅಲ್ಲ'' ಎಂದೂ ನ್ಯಾಯಾಲಯ ಹೇಳಿದೆ. ಭಾರತದಾದ್ಯಂತ ಒಂದು ಸಮಾನ ನಾಗರಿಕ ಸಂಹಿತೆ ರೂಪಿಸಲು ಪ್ರಯತ್ನಿಸಬೇಕೆಂಬ ಸಂವಿಧಾನದ 44ನೇ ಕಲಮಿಗೆ ಕೇಂದ್ರ ಸರ್ಕಾರದ ಕಾನೂನು ಇಲಾಖೆ ಏನು ಕ್ರಮ ತೆಗೆದುಕೊಂಡಿದೆಯೆಂಬುದನ್ನು ತಿಳಿಸಬೇಕೆಂದೂ ಸುಪ್ರೀಂ ಕೋರ್ಟು ನಿರ್ದೇಶಿಸಿದೆ.

ಬಹುಪತ್ನಿತ್ವದ ಲಾಭ ಪಡೆಯುವುದಕ್ಕಾಗಿ ಮತಾಂತರ ಹೊಂದುವ, ಮತೀಯ ಕಾನೂನಿನ ಆಶ್ರಯ ಪಡೆಯುವ ನೀತಿಯನ್ನು ತೀವ್ರವಾಗಿ ಟೀಕಿಸಿರುವ ಸುಪ್ರೀಂ ಕೋರ್ಟಿನ ನಿಲುವನ್ನು ಎಲ್ಲರೂ ಮೆಚ್ಚಬೇಕು. ಹಾಗೆಯೇ ಸಮಾನ ಸಂಹಿತೆಯನ್ನು ಜಾರಿಗೆ ತರಲು ಬೇಕಾಗುವಂತಹ ಸನ್ನಿವೇಶ ನಿರ್ಮಾಣ ಮಾಡದಿರುವುದಕ್ಕೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡದ್ದು ಸರಿಯಾಗಿಯೇ ಇದೆ.

ಈ ಸಂದರ್ಭದಲ್ಲಿ ಈ ತೀರ್ಪಿನ ಲಾಭವನ್ನು ದುರುಪಯೋಗಪಡಿಸಿಕೊಳ್ಳಲು ಸಿದ್ಧರಾಗಿ ಕಾದಿರುವ ಶಕ್ತಿಗಳಿಗೇನೂ ಕಡಿಮೆಯಿಲ್ಲ. ಹಿಂದೂ ಕಾನೂನು ಕಾಲಕಾಲಕ್ಕೆ ಬದಲಾವಣೆಯಾಗುತ್ತಾ ಬಂದಿದ್ದು. ಹಲವಾರು ಪ್ರಗತಿಕಾರಕ ಅಂಶಗಳನ್ನು ಒಳಗೊಂಡಿದೆಯೆಂಬುದು ವಾಸ್ತವ ಸತ್ಯವಾದರೂ, ಅಲ್ಲಿಯೂ ಕೊರತೆಗಳಿಗೇನೂ ಕಡಿಮೆಯಿಲ್ಲ. ಆದ್ದರಿಂದ ಹಿಂದೂ ಕಾನೂನನ್ನೇ ದೇಶವ್ಯಾಪಿ ಅನ್ವಯಿಸಲು ಒತ್ತಾಯ ತರುವಂಥ ಮೂಲಭೂತವಾದಿಗಳ ಪ್ರಯತ್ನವು ಸತತವಾಗಿ ನಡೆದೇ ಇರುತ್ತದೆಯೆಂಬ ಅಂಶಕ್ಕೆ ಯಾರೂ ಕಣ್ಣುಮುಚ್ಚಿ ಕೂತಿರಲು ಸಾಧ್ಯವಿಲ್ಲ.

ಬಹಳ ಕಾಲದಿಂದ ಪರಿವರ್ತನೆ ಪಡೆಯದೆ ಕುಳಿತ ಅಲ್ಪ ಸಂಖ್ಯಾತ ಸಮುದಾಯಗಳಿಗೆ ಮುಸ್ಲಿಂ ಕಾನೂನು ಮತ್ತು ಕ್ರಿಶ್ಚಿಯನ್ ಕಾನೂನುಗಳಲ್ಲಿ ರಚನಾತ್ಮಕ ಬದಲಾವಣೆಗಳಾಗಬೇಕಾದ ಅವಶ್ಯಕತೆಯಿದೆ. ಇತ್ತೀಚೆಗೆ ಮಂಡಿಸಲಾದ ಕ್ರಿಶ್ಚಿಯನ್ ಮ್ಯಾರೇಜ್ ಬಿಲ್ ಮತ್ತು ಕ್ರಿಶ್ಚಿಯನ್ ದತ್ತು ಮತ್ತು ನಿರ್ವಹಣಾ ಕಾನೂನುಗಳು ಒಂದು ಆಶಾದಾಯಕವಾತಾವರಣವನ್ನು ಸೃಷ್ಟಿಸಿವೆ.

ಮುಸ್ಲಿಂ ಮಹಿಳೆಗೆ ಸಂಬಂಧಪಟ್ಟ ಕಾನೂನಿನಲ್ಲಿ ಬದಲಾವಣೆಗಾಗಿ ಪ್ರಗತಿಪರ ತೀರ್ಪುಗಳನ್ನು ನ್ಯಾಯಾಲಯವು ಕೊಟ್ಟ ಹಲವಾರು ಸಂದರ್ಭಗಳಲ್ಲಿ ಆಳುವ ಸರ್ಕಾರದ ಮತರಾಜಕೀಯ ಮಧ್ಯೆ ಪ್ರವೇಶಿಸಿ ಅಡ್ಡಗಾಲು ಹಾಕಿದ್ದನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಹಾಗೆಯೇ ಸತಿ ನಿಷೇಧದ ಕಾನೂನಿನ ಸಂದರ್ಭದಲ್ಲೂ ಮತರಾಜಕೀಯದಿಂದ ಮಹಿಳೆಯರಿಗೆ ಅನ್ಯಾಯವಾಗಿದೆ. ಸಮಾನ ಸಿವಿಲ್ ಸಂಹಿತೆಯ ಜಾರಿಯಾಗುವಿಕೆ ಕೇವಲ ಆಕರ್ಷಕ ಘೋಷಣೆಯಿಂದ ಸಾಧ್ಯವಿಲ್ಲ; ಆದರೆ ಆಳುವವರ ದೃಢವಾದ ರಾಜಕೀಯ ಸಂಕಲ್ಪವೂ ಇದಕ್ಕೆ ಬೇಕಿದೆ. ಇದರ ಜೊತೆಗೆ ಸಮಾನ ಸಿವಿಲ್ ಸಂಹಿತೆಯ ಅಗತ್ಯತೆ ಮತ್ತು ಉಪಯುಕ್ತತೆಯ ಬಗ್ಗೆ ಜನಸಾಮಾನ್ಯರಿಗೆ ತಿಳಿವು ಮೂಡಿಸುವ ಕಾರ್ಯವನ್ನು ಬುದ್ಧಿಜೀವಿಗಳು, ಪ್ರಗತಿಪರ ಸಂಘಟನೆಗಳು, ಮಹಿಳಾ ಸಂಘಟನೆಗಳು ಮಾಡಬೇಕಾಗಿದೆ. ಅದೇ ಈಗ ನಮ್ಮ ಮುಂದಿರುವ ಸವಾಲು.

—ಎನ್. ಗಾಯಿತ್ರಿ

ನಿಶ್ಶಬ್ದವಾಗಿ ಇನ್ನಿಲ್ಲವಾದ ವೆಂಕಮ್ಮ

—ಎಸ್. ಗಾಯಿತ್ರಿ

'ತಿಳಿಯದವರಿಗೆ ತಿಳಿಸಿ ಹೇಳುವುದು, ತಿಳಿದವರಿಗೆ ಇನ್ನೂ ಹೆಚ್ಚು ತಿಳಿಯ ಹೇಳುವುದು, ನುಡಿದವರಿಗೆ ಅದರಂತೆ ನಡೆಯಹೇಳುವುದು ವೀರಮಾತೆಯ ಕರ್ತವ್ಯ' ಎಂದು ಘೋಷಿಸಿಕೊಂಡು. ಆ ದಿಕ್ಕಿನತ್ತ ಅವಿರತವಾಗಿ ಶ್ರಮಿಸಿದ, 'ವೀರಮಾತೆ' ಪತ್ರಿಕೆಯ ಸಂಪಾದಕೀಯರಲ್ಲೊಬ್ಬರಾದ ವೆಂಕಮ್ಮ ಕೊಯಿಮುತ್ತೂರ ಇನ್ನಿಲ್ಲ. 1952 ರಿಂದ 1970 ರವರೆಗೆ ಧಾರವಾಡದ ವನಿತಾ ಸೇವಾ ಸಮಾಜದಿಂದ ಪ್ರಕಟವಾಗುತ್ತಿದ್ದ 'ವೀರಮಾತೆ' ಪತ್ರಿಕೆಯ ಜೀವನಾಡಿಯಾಗಿ ನುಡಿದು, ಅಂದಿನ ಸಾಹಿತ್ಯಕ ಮತ್ತು ಸಾಮಾಜಿಕ ಜೀವನವನ್ನು ಪ್ರಭಾವಿಸುವಲ್ಲಿ ಮಹತ್ತರ ಪಾತ್ರವಹಿಸಿದ ವೆಂಕಮ್ಮ ಏಪ್ರಿಲ್ 17 ರಂದು ತಮ್ಮ ಕೊನೆಯುಸಿರೆಳೆದರು. ಅವರ ಸಾವು ನಮ್ಮ ಸಾಂಸ್ಕೃತಿಕ, ಸಾಮಾಜಿಕ ವಲಯದಲ್ಲಿ ಸುದ್ದಿಯಾಗಲಿಲ್ಲ. ಅವರು ಪತ್ರಕರ್ತೆಯಾಗಿ ದುಡಿದಿದ್ದರೂ, ಪತ್ರಕರ್ತರ ಮಾಸಾಶನ ಪಡೆಯುತ್ತಿದ್ದರೂ ಪತ್ರಿಕಾ ಜಗತ್ತಿನಲ್ಲೂ ಇದು ಸುದ್ದಿಯಾಗಲಿಲ್ಲ. ಹಾಗೆಂದು ಸಾಮಾಜಿಕ ಕ್ಷೇತ್ರದಲ್ಲಿ ಅವರು ನಡೆಸಿದ ಸಮಾಜಸೇವೆ, ಪತ್ರಿಕಾ ರಂಗಕ್ಕೆ ಅವರು ಕೊಟ್ಟ ಕೊಡುಗೆ ಕಡಿಮೆ ಮೌಲ್ಯದ್ದೇನೂ ಅಲ್ಲ.

'ಎಲ್ಲ ಜಾತಿಯ ಸ್ತ್ರೀಯರ ಶಾರೀರಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ಬೆಳವಣಿಗೆಯಾಗಿ, ಅವರು ಇನ್ನೊಬ್ಬರ ಮೇಲೆ ಅವಲಂಬಿಸಿಕೊಂಡು ಜೀವನ ನಡೆಸುವ ಪದ್ಧತಿಯು ಪೂರಾ ಹೋಗಿ ಅವರು ಸ್ವಾವಲಂಬಿಗಳಾಗಬೇಕು' ಎನ್ನುವ ಹಿರಿದಾದ ಉದ್ದೇಶದಿಂದ 1928 ರಲ್ಲಿ ಧಾರವಾಡದಲ್ಲಿ ಹುಟ್ಟಿಕೊಂಡದ್ದು ವನಿತಾ ಸೇವಾ ಸಮಾಜ. ಇಂತಹ ಸಮಾಜಕ್ಕೆ ವೆಂಕಮ್ಮ ಸೇರಿದ್ದು ಒಂದು ಆಕಸ್ಮಿಕ; ಹಾಗೂ ಅನಿವಾರ್ಯ. ಹದಿನಾರಕ್ಕೆ ಮದುವೆಯಾಗಿ, ಹತ್ತೊಂಭತ್ತಕ್ಕೆ ವಿಧವೆಯೂ, ಒಂದೂವರೆ ವರ್ಷದ ಮಗುವಿನ ತಾಯಿಯೂ ಆದ ವೆಂಕಮ್ಮನ ಬಾಳನ್ನು ರೂಪಿಸಿದವರಲ್ಲಿ ಅವರ ತಾಯಿಯ ಪಾತ್ರ ಹಿರಿದು. ಬಡತನದ ಕುಟುಂಬದಲ್ಲಿ ಬದುಕಿನ ಅರ್ಥದ ಬೆಲೆಯನ್ನು ಕಂಡುಕೊಂಡ ಆ ಮಹಾತಾಯಿ, ಮಗಳು ಮುಂದೆ ಪರಾಧೀನದಲ್ಲಿ ಬಾಳುವಂತೆ ಆಗಬಾರದೆಂಬ ಮುಂದಾಲೋಚನೆಯಿಂದ ವೆಂಕಮ್ಮನವರನ್ನು ಕೈಕೂಸಿನೊಂದಿಗೆ ಧಾರವಾಡದ ವನಿತಾ ಸೇವಾ ಸಮಾಜಕ್ಕೆ 1941ರಲ್ಲಿ ಸೇರಿಸಿದರು. ಅಲ್ಲಿ ವೆಂಕಮ್ಮನವರು ಎಸ್.ಎಸ್.ಎಲ್.ಸಿ.ಯನ್ನು ಮುಗಿಸಿ ಎಸ್.ಟಿ.ಸಿ. ತರಬೇತಿ ಪಡೆದು, ಅದೇ ಸಮಾಜದಲ್ಲಿ ಅಧ್ಯಾಪಕಿಯಾದರು. ಅಷ್ಟೇ ಅಲ್ಲ, ಆ ಸಮಾಜ ನಿರ್ವಹಿಸುತ್ತಿದ್ದ ಎಲ್ಲಾ ಸಾಮಾಜಿಕ ಕಾರ್ಯಗಳಲ್ಲೂ ತನ್ಮಯತೆಯಿಂದ ದುಡಿದರು.

1952ರಲ್ಲಿ 'ವನಿತಾ ಸೇವಾ ಸಮಾಜ'ದ ಪ್ರಕಟಣೆಯಾಗಿ ಹೊರಬಂದ 'ವೀರಮಾತೆ' ಪತ್ರಿಕೆ ಸಾಮಾಜಿಕ ಕಳಕಳಿಯಿಂದ ಕೂಡಿದ ವಿಚಾರ, ಪ್ರಚೋದಕ ಪತ್ರಿಕೆಯಾಗಿತ್ತು. ಸಂಪಾದಕಿಯರಲ್ಲೊಬ್ಬರಾದ ಸರೋಜಿನಿ ಮಹಿಷಿಯವರೊಂದಿಗೆ ವೆಂಕಮ್ಮನವರು ಪತ್ರಿಕೆಗಾಗಿ



ಸರ್ವವಿಧಲ್ಲೂ ದುಡಿದರು. ಚಂದಾ ಸಂಗ್ರಹಿಸುವುದರಿಂದ ಹಿಡಿದು ಮುದ್ರಣದ ಕಾರ್ಯದವರೆಗೂ, ಎಳೆಯರಿಂದ, ಹಿರಿಯರಿಂದ ಲೇಖನಗಳನ್ನು ಬರೆಸುವುದರಿಂದ ಹಿಡಿದು ಸಮಯ ಬಂದಾಗ ತಾವೇ ಲೇಖನಗಳನ್ನು ಬರೆದೂ ಪತ್ರಿಕೆಯು ಸಕಾಲದಲ್ಲಿ ಬರುವಂತೆ ನೋಡಿಕೊಳ್ಳುತ್ತಿದ್ದರು.

ಹೀಗೆ ತಮ್ಮ ಜೀವಿತದ ಬಹಳಷ್ಟು ಕಾಲ ಪಾದರಸದಂತೆ ಚುರುಕಾಗಿ ಬಾಳು ಸಾಗಿಸಿದ ವೆಂಕಮ್ಮ,

ಡೆಯು ಎಂಟು ಹತ್ತು ವರ್ಷಗಳ ಕಾಲ ರೋಗಿಯಾಗಿ ಜೀವ ಸವೆಸಬೇಕಾಯಿತು. ಕೀಲು ನೋವಿನಿಂದ ಬಹಳ ವಾಗಿ ನೋವನ್ನನುಭವಿಸುತ್ತಿದ್ದ ವೆಂಕಮ್ಮ ಮಾನಸಿಕ ವಾಗಿ ಅಷ್ಟೇ ಎಚ್ಚರವಾಗಿದ್ದರು; ಚುರುಕಾಗಿದ್ದರು. ವನಿತಾ ಸಮಾಜ ಹಾಗೂ ವೀರಮಾತೆಯು ಸಾಧನೆಗಳ ಬಗ್ಗೆ ತುಂಬು ಅಭಿಮಾನದಿಂದ ಮಾತನಾಡುತ್ತಿದ್ದ ವೆಂಕಮ್ಮನವರು ಕಡೆಗಳಿಗೆಯವರೆಗೂ ಸಮಕಾಲೀನ ಜಗತ್ತಿನ ಆಗುಹೋಗುಗಳ ಬಗ್ಗೆ, ಆರೋಗ್ಯಕರ ರೀತಿ ಯಲ್ಲಿ ಚಿಂತಿಸುತ್ತಿದ್ದರು, ಚರ್ಚಿಸುತ್ತಿದ್ದರು. ಪ್ರಗತಿ ಪರ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆತ್ಮೀಯವಾಗಿ ಅವರ ವಿಚಾರ ಮತ್ತು ಆರೋಗ್ಯಕ್ಕೆ ಪ್ರತಿಸ್ಪಂದಿಸಿದ ಅವರ ತಮ್ಮಂದಿರಾದ ಆನಂದ ಮತ್ತು ಜಯತೀರ್ಥ ಅವರು ಅವರ ಬಾಳಿನ ಮುಖ್ಯ ಉಸಿರಾಗಿದ್ದರು. ಸಾಯುವ ಹಿಂದಿನ ದಿನವೂ ಸಮ ಕಾಲೀನ ಆಗುಹೋಗುಗಳ ಬಗ್ಗೆ ಕಾಳಜಿಯಿಂದ ವಿಚಾ ರಿಸಿಕೊಳ್ಳುತ್ತಾ, ತಮ್ಮಿಂದ ಏನೂ ಮಾಡಲಾಗದಿದ್ದರೂ ರಚನಾತ್ಮಕವಾಗಿ ಪ್ರತಿಕ್ರಿಯಿಸುತ್ತಾ, ಆಶಾವಾದಿಯಾಗಿ ಬಾಳಿದ ವೆಂಕಮ್ಮನ ಜೀವನ ಮತ್ತು ಚಟುವಟಿಕೆ ಬೆರಗು ಗೊಳಿಸುತ್ತದೆ.

ಅಂದು ಏಪ್ರಿಲ್ 18, ಬ್ಯಾಂಕಿಗೆ ಹೊರಡುವ ಸಮಯಕ್ಕೆ ವೆಂಕಮ್ಮನವರ ಸಾವನ್ನು ಅವರ ತಮ್ಮ ಫೋನ್ ಮೂಲಕ ತಿಳಿಸಿದಾಗ, ಒಂದು ನಿಮಿಷ ಕಸಿವಿಸಿ ಯಾಯಿತು. ಹಾಸಿಗೆ ಹಿಡಿದು ಮಲಗಿದ್ದ ವೆಂಕಮ್ಮ ನವರನ್ನು ಒಂದೆರಡು ಬಾರಿ ಕಂಡು ಬಂದಿದ್ದೆನಾದ್ದರಿಂದ ಈ ಸುದ್ದಿ ಅನಿರೀಕ್ಷಿತವಾಗಿರಲಿಲ್ಲ. ಬ್ಯಾಂಕಿಗೆ ಹೋಗಿ ಮಧ್ಯಾಹ್ನ ವೆಂಕಮ್ಮನವರನ್ನು ಕಡೆಯ ಬಾರಿಗೆ ಕಂಡು ಬರೋಣವೆಂದು ಚಿತಾಗಾರಕ್ಕೆ ಹೋದೆ. ಹೋದದ್ದು ತಡವಾಗಿತ್ತು. ಮುಖದರ್ಶನ ಸಿಗಲಿಲ್ಲ. ನಿಗಿನಿಗಿ ಕೆಂಡ ವಾದ ವೆಂಕಮ್ಮನ ದರ್ಶನಮಾಡಿ ಈಚೆ ಬಂದ ನಂತರ ಒಮ್ಮೆ ಮನಸ್ಸು ಪಿಚ್ಚೆನ್ನಿಸಿತು. ನೂರಾರು ಜನದ ಬಾಳಿನ ದೀಪ ಹಚ್ಚಿದ ವೆಂಕಮ್ಮ ಇಲ್ಲಿ ಬದುಕಿದಷ್ಟೇ ಸರಳವಾಗಿ, ನಿಶ್ಶಬ್ಧವಾಗಿ, ನಿರಾಡಂಬರೆಯಾಗಿ ಕೊನೆ ಯಲ್ಲೂ ಯಾರ ಗಮನಕ್ಕೆ ಬರದೆ ಹೋದರು. ಆವರು ಜಾಗೃತಿ ಮತ್ತು ಅಚಲದ ಬೆಳವಣಿಗೆಗೆ ತೋರಿಸಿದ ಪ್ರೀತಿ, ವಿಶ್ವಾಸ ಎಲ್ಲ ಒಮ್ಮೆ ನೆನಪಿಗೆ ಬಂದು ಮನಸ್ಸು ಆರ್ದ್ರವಾಯಿತು.

ಅಭಿನಂದನೆ

ಪ್ರಶಸ್ತಿ ಪಡೆದ ಮಹಿಳಾ ವಿಜ್ಞಾನಿ

ಬೆಂಗಳೂರಿನ ಬಿ.ಇ.ಎಲ್. ಕಾರ್ಖಾನೆಯಲ್ಲಿ ಅಡಿಶನಲ್ ಜನರಲ್ ಮ್ಯಾನೇಜರ್ ಆಗಿರುವ ಶ್ರೀಮತಿ ಡಿ. ಲಕ್ಷ್ಮಿ ಅವರಿಗೆ 'ವಿವಿಧ ಲಕ್ಷ್ಮಿ ಔದ್ಯೋಗಿಕ ಸಂಶೋಧನಾ ವಿಕಾಸ ಕೇಂದ್ರ ಪ್ರಶಸ್ತಿ' ಲಭಿಸಿದೆ. ಎಲೆಕ್ಟ್ರಾನ್ ವಿಜ್ಞಾನ ಹಾಗೂ ತಂತ್ರಜ್ಞಾನದ ವಿವಿಧ ರಂಗಗಳ ವಿಕಾಸಕ್ಕೆ ಇವರು ನೀಡಿ ರುವ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. 1961ರಲ್ಲಿ ಬಿ.ಇ.ಎಲ್. ಕಾರ್ಖಾ ನೆಯನ್ನು ಸೇರಿದ ಲಕ್ಷ್ಮಿ ಸತತ ಪ್ರಯತ್ನ ಪರಿಶ್ರಮದಿಂದ ಭಾರತೀಯ ಭೂಸೇನೆ, ವಾಯುಸೇನೆ, ನೌಕಾಪಡೆ ಹಾಗೂ ದೂರದರ್ಶನಗಳ ಅನೇಕ ಉತ್ಪಾದನೆಗಳ ವಿಕಾಸಕ್ಕೆ ದುಡಿದರು. ಬಿ.ಇ.ಎಲ್. ಕಾರ್ಖಾನೆಯ 'ಸಿಮ್ಯುಲೇಟರ್' ವಿಭಾಗದ ಸ್ಥಾಪನೆಗೆ ಕಾರಣರಾದ ಲಕ್ಷ್ಮಿ ಅವರಿಗೆ 1990 ರಲ್ಲಿಯೇ ಇವರ ಔದ್ಯೋಗಿಕ ಕೊಡುಗೆಯನ್ನು ಗುರುತಿಸಿ ಎಫ್. ಐ. ಸಿ. ಸಿ. ಐ. 'ಮಹಿಳಾ ಉದ್ಯೋಗ ಪ್ರಶಸ್ತಿ' ನೀಡಿತ್ತು. ಇವರ 'ಸಿಮ್ಯುಲೇಟರ್' ವಿಭಾಗ ಭಾರತೀಯ ನೌಕಾ ಸೇನೆಗೆ 'ಹಡಗು ನಡೆಸುವ' ತರಪೇತಿ ನೀಡಲು 'ಸಿಮ್ಯುಲೇಟರ್' ಒಂದನ್ನು ಯಶಸ್ವಿಯಾಗಿ ತಯಾರಿಸಿ ಕೊಟ್ಟಿದೆ. ಅಪೂರ್ವ ಸಾಧನೆಯ ಶ್ರೀಮತಿ ಡಿ. ಲಕ್ಷ್ಮಿ ಅವರಿಗೆ ಅಚಲದ ಅಭಿನಂದನೆ.

ಅಚ್ಚಳಿಯದ ಸ್ತ್ರೀ ಶಿಲ್ಪಗಳ ಕೆತ್ತಿದ ಕತೆಗಾರ್ತಿ : ಕಾತ್ಯಾಯಿನಿ

–ಬಿ.ಎನ್. ಸುಮಿತ್ರಾ ಬಾಯಿ

ಇದೇ ಮೇ ತಿಂಗಳ 12ನೇ ತಾರೀಖು ಕನ್ನಡ ಕಥಾ ಲೋಕದಿಂದ ಕಣ್ಮರೆಯಾದ ದಿವಂಗತ ಎಚ್.ಎಸ್. ಕಾತ್ಯಾಯಿನಿ ಅವರ ಚಿರ ನೆನಪಿಗೆ–ಅಚಲ ಅರ್ಪಿಸುತ್ತಿರುವ ಲೇಖನವಿದು.

—ಸಂ.

ನಲವತ್ತರ ದಶಕದಲ್ಲಿ ಕನ್ನಡ ಕಥಾ ಸಾಹಿತ್ಯಕ್ಕೆ ಕಾಲಿರಿಸಿದ ಅಪೂರ್ವ ಲೇಖಕಿಯರಲ್ಲಿ ಒಬ್ಬರಾದ ಎಚ್. ಎಸ್. ಕಾತ್ಯಾಯಿನಿ ಬರೆದದ್ದು ಬಹಳವಲ್ಲ. ಆದರೆ ತಮ್ಮ ಪ್ರತಿಭೆಯ ಹೊಳಹನ್ನು ಉಳಿಸಿಹೋಗಿದ್ದಾರೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಎಸಳೂರು ಪೇಟೆ ಗ್ರಾಮದವರಾದ ವೈ.ಎಚ್. ಸಿದ್ದಯ್ಯ ಮತ್ತು ರುದ್ರಮ್ಮ ದಂಪತಿಗಳ ಮೊದಲ ಮಗಳಾಗಿ ಕಾತ್ಯಾಯಿನಿಯವರು ಜನಿಸಿದ್ದು 16.6.1923ರಲ್ಲಿ, ಇವರ ನಂತರ ಮೂವರು ಸೋದರಿಯರು, ನಾಲ್ವರು ತಮ್ಮಂದಿರನ್ನು ಒಳಗೊಂಡ ತುಂಬು ಕುಟುಂಬ ಅವರದು.

ಪ್ರಾಥಮಿಕ ಶಾಲೆಯ ಹೆಡ್ಮಾಸ್ತರರಾಗಿದ್ದ ಸಿದ್ದಯ್ಯನವರಿಗೆ ಶಿಕ್ಷಣ ಹೆಣ್ಣುಗಂಡೆಂಬ ಭೇದವಿಲ್ಲದಂತೆ ಎಲ್ಲರಿಗೂ ದೊರಕಬೇಕೆಂಬ ದೃಢವಾದ ನಂಬಿಕೆ. ಆದ್ದರಿಂದ ತಮ್ಮ ಎಲ್ಲ ಮಕ್ಕಳಿಗೂ ಉಚ್ಚಮಟ್ಟದ ಶಿಕ್ಷಣ ಕೊಡಿಸಬೇಕೆಂಬ ಛಲ ಅವರದು. ಮೊದಲ ಮಗಳು ಕಾತ್ಯಾಯಿನಿಯ ಮೊದಲ ವಿದ್ಯಾಭ್ಯಾಸ ಆಲೂರಿನ ಪ್ರಾಥಮಿಕ ಶಾಲೆಯಲ್ಲಿ ಆರಂಭವಾದಾಗ ಅಲ್ಲಿದ್ದದ್ದು ಇವರೊಬ್ಬರೇ ಹುಡುಗಿ, ಉಳಿದವರೆಲ್ಲರೂ ಹುಡುಗರು. ಮಾಧ್ಯಮಿಕ ಶಾಲೆಗೆ ಮಗಳು ಸೇರುವಾಗ ತಂದೆ ಸ್ವತಃ ಹಾಸನಕ್ಕೆ ವರ್ಗ ಪಡೆದು, ಅಲ್ಲಿ ಮಗಳನ್ನು ಶಾಲೆಗೆ ಸೇರಿಸಿದ್ದರು. ಎಲ್ಲ ವಿಷಯಗಳಲ್ಲಿ ಈಕೆ ಮೊದಲಿಗರಾಗಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದರು.

ಎಲ್.ಎಸ್. ಆದಕೂಡಲೆ ಹೆಣ್ಣು ಮಕ್ಕಳ ಶಿಕ್ಷಣ ನಿಲ್ಲಿಸಿ, ಮದುವೆ ಮಾಡಿ ಬಿಡುತ್ತಿದ್ದ ಕಾಲ ಅದು. ಆದರೆ ಸಿದ್ದಯ್ಯನವರು ಹಾಗೆ ಮಾಡದೆ ಕಾತ್ಯಾಯಿನಿಯವರನ್ನು ಪ್ರೌಢಶಾಲೆಗೆ ಸೇರಿಸಿದರು. ಆ ಹಂತದಲ್ಲೇ ಭೌತಶಾಸ್ತ್ರದಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡ ಕಾತ್ಯಾಯಿನಿ ಮುಂದೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಹಾಗೂ ಬಿಎಸ್‌ಸಿ ಆನರ್ಸ್ ಮುಗಿಸಿದರು. ಪದವಿ ಪಡೆದ ಕೂಡಲೆ ಮಹಾರಾಣಿ ಕಾಲೇಜಿನಲ್ಲೇ ಕೆಲಸಕ್ಕೆ ಸೇರಿ, ದುಡಿಮೆಯ ನಡುವೆ ಎಂ.ಎಸ್.ಸಿ. ಪದವಿ ಗಳಿಸಿ, ಅದೇ ಕಾಲೇಜಿನಲ್ಲಿ ಭೌತಶಾಸ್ತ್ರದ ಉಪನ್ಯಾಸಕಿಯೂ ಆದರು. 1944 ರಿಂದ 1968ರವರೆಗೆ ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿ, ಪ್ರಾಧ್ಯಾಪಕಿಯಾಗಿದ್ದು ಮುಂದೆ ಮೈಸೂರಿನ ಮಹಾರಾಣಿ ಕಾಲೇಜಿಗೆ ವರ್ಗ ಹೊಂದಿ, ನಿವೃತ್ತಿ ಹೊಂದುವವರೆಗೂ ಅಲ್ಲಿ ದುಡಿದರು. ಕೊನೆಯ ಅವಧಿಯಲ್ಲಿ ಅಲ್ಲಿನ ಪ್ರಾಂಶುಪಾಲರೂ ಆಗಿದ್ದರು.

ಹೈಸ್ಕೂಲು ದಿನಗಳಿಂದಲೂ ಪದ್ಯಗಳನ್ನು ಕಥೆಗಳನ್ನು ಬರೆಯುತ್ತಿದ್ದ ಕಾತ್ಯಾಯಿನಿ ಹಲವಾರು ಪತ್ರಿಕೆಗಳಿಗೆ ಕಳಿಸಿ, ಬಹುಮಾನಗಳನ್ನು ಪಡೆದಿದ್ದವರು.



ಆದರೆ ತಮ್ಮ ಲೇಖನಿಯಲ್ಲಿ ಹುದುಗಿದ್ದ ಶಕ್ತಿಯ ನಿಜವಾದ ಅರಿವು ಅವರಲ್ಲಿ ಬೆಳೆದದ್ದು ಸೆಂಟ್ರಲ್ ಕಾಲೇಜಿನಲ್ಲಿ ಓದಿನ ದಿನಗಳಲ್ಲಿ ಅಲ್ಲಿನ ಕನ್ನಡ ಸಂಘದ ಕಾರ್ಯದರ್ಶಿತ್ವ, ವಿದ್ಯಾರ್ಥಿಗಳು ಹೊರ ತರುತ್ತಿದ್ದ ಕೈಬರಹದ ಪತ್ರಿಕೆಗೆ ಬರೆಯುವುದು ಕಾತ್ಯಾಯಿನಿಯವರಲ್ಲಿ ಇದ್ದ ಸೃಜನಶೀಲತೆಯನ್ನು ಜಾಗೃತಗೊಳಿಸಿದ್ದವು. ಎಲ್ಲಕ್ಕಿಂತ ಹೆಚ್ಚಾಗಿ, ಇವರ ಅಧ್ಯಾಪಕರಾಗಿದ್ದ ಜಿ. ಪಿ. ರಾಜರತ್ನಂ ಅವರು ಈ ಯುವತಿಯಲ್ಲಿ ಹುದುಗಿದ್ದ ಕತೆಗಾರ್ತಿ ಹೊರಬರಲು ಪ್ರಬಲವಾದ ಪ್ರೇರಣೆ, ಬೆಂಬಲಗಳನ್ನು ನೀಡಿದ್ದರು. ಚರ್ಚಾಸ್ಪರ್ಧೆಗಳಲ್ಲಿ ಚತುರ ವಾಗ್ಮಿಯಾಗಿ ಜಯಗಳಿಸುತ್ತಿದ್ದ ಕಾತ್ಯಾಯಿನಿಗೆ

ನಾಟಕಗಳಲ್ಲಿ ಅಭಿನಯಿಸುವುದರಲ್ಲೂ ವಿಶೇಷ ಆಸಕ್ತಿ. ಜಲವರ್ಣಗಳಿಂದ ಚಿತ್ರರಚಿಸುವುದು ಅವರ ಅಂತರಂಗದ ಆಪ್ತ ಆಸಕ್ತಿಯಾಗಿತ್ತು. ಆದರೆ ಇವೆಲ್ಲದರಲ್ಲಿ ಮೇಲುಗೈ ಪಡೆದದ್ದು ಕತೆಗಾರ್ತಿಯ ಪ್ರತಿಭೆಯೇ ಎನ್ನಬಹುದು. ಗುರುಗಳಾದ ಜಿ.ಪಿ. ರಾಜರತ್ನಂ ಅವರು ಪ್ರಾಸ್ತಾವಿಕವಾಗಿ, ಯಾವುದೋ ಸಂದರ್ಭದಲ್ಲಿ 'ಹೆಂಗಸರ ಅನುಭವವನ್ನು ಹೆಂಗಸರು ತುಂಬಾ ಸಹಜವಾಗಿ ಚಿತ್ರಿಸಬಲ್ಲರು' ಎಂದು ಹೇಳಿದ ಮಾತು ಎಳೆಯ ಕತೆಗಾರ್ತಿಯ ಮನದಲ್ಲಿ ಬಲವಾಗಿ ಅಚ್ಚೊತ್ತಿತ್ತು. ಸ್ತ್ರೀಯರ ಅನುಭವದ ಲೋಕವನ್ನೇ ಕೇಂದ್ರವಾಗಿಟ್ಟುಕೊಂಡು ಕತೆಗಳನ್ನು ಬರೆಯಬೇಕು ಎಂಬುದು ಕಾತ್ಯಾಯಿನಿಯವರಲ್ಲಿ ಒಂದು ಬಲವಾದ ಆಕಾಂಕ್ಷೆಯಾಗಿ ಬೆಳೆಯಿತು.

ಕಾತ್ಯಾಯಿನಿಯವರ ಸಂವೇದನೆಯ ಮೇಲೆ ಗಾಢವಾದ ಪ್ರಭಾವವುಳಿಸಿದಂಥ ಘಟನೆ ನಡೆದದ್ದು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದೇಶವಿಡೀ ವಿದ್ಯಾರ್ಥಿ ಸಮುದಾಯವು ತರಗತಿಯ ಬಹಿಷ್ಕಾರ, ಮೆರವಣಿಗೆ, ಬಹಿರಂಗ ಸಭೆಗಳ ಮೂಲಕ ಪ್ರತಿಭಟಿಸುತ್ತಿದ್ದ, ಕಾವೇರಿದ್ದ ವಾತಾವರಣ, ಕಾತ್ಯಾಯಿನಿ ಕೂಡ ಎಲ್ಲ ವಿದ್ಯಾರ್ಥಿಗಳ ಜೊತೆ ತರಗತಿಗಳನ್ನು ಬಹಿಷ್ಕರಿಸಿ, ಹೊರಬಂದು, ಸಭೆಗಳಲ್ಲಿ ಸಹಸ್ರಾರು ಜನರನ್ನು ಉದ್ದೇಶಿಸಿ ಉತ್ಸ್ಫೂರ್ತ ಭಾಷಣಗಳನ್ನು ಮಾಡಿದರು, ಸಂಪ್ರದಾಯ ಮನೋಭಾವದ, ಸಂಕುಚಿತ ದೃಷ್ಟಿಯ ಜನರು ಹೆಣ್ಣುಮಗಳೊಬ್ಬರು ಹೀಗೆ ನಾಯಕತ್ವ ವಹಿಸುವುದನ್ನು ಸಹಿಸದೆ, ಟೀಕೆ–ನಿಂದನೆಗಳನ್ನು ಇವರತ್ತ ಎಸೆದದ್ದರಿಂದ ಸೂಕ್ಷ್ಮ ಸ್ವಭಾವದ ಕಾತ್ಯಾಯಿನಿಗೆ ಬಲವಾದ ಆಘಾತವೊದಗಿತು. ಕಡ್ಡಾಯವಾಗಿ ಮುಚ್ಚಿದ್ದ ಶಾಲಾ-ಕಾಲೇಜುಗಳು ಮತ್ತೆ ತೆರೆದು, ವಿದ್ಯಾಭ್ಯಾಸ ಮತ್ತೆ ಮುಂದುವರೆಯಿತಾದರೂ ಸಾವಿರಾರು ಜನರನ್ನು ಮಂತ್ರ ಮುಗ್ಧರನ್ನಾಗಿಸುವಂಥ ವಾಕ್ ಶಕ್ತಿ ಪಡೆದಿದ್ದ ಈ ಲೇಖಕಿ ತನ್ನನ್ನೇ ಮೌನದ ಗೂಡಿಗೆ ತಳ್ಳಿಕೊಂಡು ಬಿಟ್ಟಿದ್ದರು. ಜನರ ಸಹವಾಸವೇ ಬೇಡವೆಂಬ ನಿರ್ಧಾರ ತೀವ್ರವಾದ ಅಂತರ್ಮುಖತೆಗಳಿಂದ ಅದೇ ತಾನೇ ವಿಕಸಿತವಾಗತೊಡಗಿದ್ದ ಅವರ ಬರಹದ ಲೋಕ ತುಂಬ ಪರಿಮಿತಿಗೆ ಒಳಗಾಯಿತು. ಓದು ಮುಂದುವರೆಸಿದರು, ಉದ್ಯೋಗ ಗಳಿಸಿ, ಕ್ರಮವಾಗಿ ಅದರಲ್ಲಿ ಪ್ರಗತಿ ಸಾಧಿಸಿದರು. ಎಲ್ಲ ನಿಜ, ಆದರೆ ಯೌವನದ ತೀವ್ರತೆಯಲ್ಲಿ ಮಿಂಚಿದ್ದ ರಾಜಕೀಯ ಪ್ರಜ್ಞೆ, ಸಮಾಜಕ್ಕೆ ಅಭಿಮುಖವಾಗುವ ಗುಣ, ನಾಯಕತ್ವದ ಸತ್ವಗಳೆಲ್ಲ ಶಾಂತವಾಗಿ ಬಿಟ್ಟಿದ್ದವು. ತಾವಾಯಿತು, ತಮ್ಮ ಕೆಲಸವಾಯಿತು, ಎಂಬಂಥ ಭಾವನೆಯಲ್ಲಿ ಬರೆಯುವ, ಹೊರಲೋಕಕ್ಕೆ ತೆರೆದುಕೊಳ್ಳುವ ಆಸಕ್ತಿ ಕೂಡ ಕುಗ್ಗಿತು. ಏಕಾಕಿ ಮನದ ಭಾವನೆಗಳ ಬಿತ್ತರಕ್ಕೆ ಜಲವರ್ಣದ ಚಿತ್ರಕಲೆ ಆಧಾರವಾಗಿ ಉಳಿಯಿತು.

“ನೂರಾರು ಹೆಣ್ಣು ಮಕ್ಕಳಲ್ಲಿ ಒಬ್ಬೊಬ್ಬರ ಸ್ವಭಾವ ಒಂದೊಂದು ಥರಾ. ಜಗತ್ತಿನ ಎಲ್ಲ ಹೆಣ್ಣುಗಳ ಸ್ವಭಾವಗಳನ್ನು ಶಿಲ್ಪದ ಹಾಗೆ ಸ್ಫುಟವಾಗಿ ಮೂರ್ತವಾಗಿ ಕೆತ್ತಿಡಬೇಕು’’ ಎನ್ನುವುದು ಕಾತ್ಯಾಯಿನಿಯವರ ಕಥೆಗಳ ಹಿಂದೆ ಇದ್ದ ಅಪೇಕ್ಷೆ. ಸುತ್ತಲಿನ ಬದುಕಲ್ಲಿ ದಿನನಿತ್ಯ ಕಾಣುವ ಸಾಮಾನ್ಯ ಸ್ತ್ರೀಯರೇ ಅವರ ಕಥೆಗಳ ಮುಖ್ಯ ಪಾತ್ರಗಳು. ತಮ್ಮ ನಿಕಟ ಬದುಕಲ್ಲಿ ಸ್ವತಃ ಕಂಡವರು ಹಲವು ಸಲ ಇತರರಿಂದ ಕೇಳಿ ತಿಳಿದವರ ಬಗ್ಗೆ ಕಲ್ಪನೆಯ ನೆರವಿಂದ, ಅಂದಗೊಳಿಸಿ ಸೃಷ್ಟಿಸಿದ ಸ್ತ್ರೀಪ್ರಪಂಚ ಇವರ ಕಥೆಗಳದು. ‘ಬದುಕುವ ಸಾಮರ್ಥ್ಯದಲ್ಲಿ ಹೆಣ್ಣು ಗಂಡು ಎಂಬ ಅಂತರವೇನೂ ಇಲ್ಲ. ಇಬ್ಬರಲ್ಲಿ ಯಾರೊಬ್ಬರೂ ಇನ್ನೊಬ್ಬರಿಗಿಂತ ಮೇಲು ಅಥವಾ ಕೀಳು ಅಲ್ಲ. ಅವರವರದೇ ಆದ ವ್ಯಕ್ತಿತ್ವ ಇಬ್ಬರಿಗೂ ಇರುತ್ತದೆ’ ಎನ್ನುವ ಸಮತೆಯ ಧೋರಣೆಯು ಕಾತ್ಯಾಯಿನಿ ಬರಹದ ವೈಶಿಷ್ಟ್ಯವಾಗಿದೆ. ಆದರೆ ಬದುಕಿಗೆ ಸ್ಪಂದಿಸುವ ರೀತಿಯಲ್ಲಿ ಹೆಂಗಸರಲ್ಲಿ ಅವರದೇ ಆದ ವಿಶಿಷ್ಟತೆಯೊಂದು ಇರುತ್ತದೆ. ಅದು ಗಂಡಸರದಕ್ಕಿಂತ ಭಿನ್ನವಿರಲೂ ಸಾಧ್ಯ ಎನ್ನುವುದು ಅವರ ದೃಷ್ಟಿಯಿದ್ದಂತೆ ತೋರುತ್ತದೆ.

ಕಾತ್ಯಾಯಿನಿಯವರ ಬಹುಮುಖ್ಯ ಮಾಧ್ಯಮ ಸಣ್ಣ ಕಥೆಯದು. ‘ಮಾಲಾ ಮತ್ತು ಇತರ ಕತೆಗಳು’, ‘ಗೌರಿ ಮತ್ತು ಇತರ ಕತೆಗಳು’ ಎಂಬ ಎರಡು ಸಂಕಲನಗಳಲ್ಲಿ ಪ್ರಕಟಿಸಿರುವ ಹದಿನಾರು ಕಥೆಗಳೂ ಒಬ್ಬೊಬ್ಬ ಸ್ತ್ರೀಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿವೆ. ಕಥೆಯ ಶೀರ್ಷಿಕೆಯೂ ನಾಯಕಿಯರ ಹೆಸರೂ ಯಾವಾಗಲೂ ಒಂದೇ ಆಗಿರುತ್ತವೆ. ಜಿ.ಪಿ. ರಾಜರತ್ನಂ ಅವರು ಈ ಕತೆಗಳಲ್ಲಿ ‘ಹೆಣ್ಣಿನ ಸುಖದುಃಖಗಳ ಉಯ್ಯಾಲೆಯ ನೆರಳು’ಗಳನ್ನು ಗುರುತಿಸುತ್ತಾರೆ. ಆದರೆ ಹೆಣ್ಣಿನ ಬದುಕಿನ ಸುಖ-ದುಃಖಗಳ ದಾಖಲೆಗಷ್ಟೇ ಈ ಕತೆಗಳು ಸೀಮಿತವಲ್ಲ. ಕಲೆಗೆ ಒಂದು ವಸ್ತುವಾಗಿ, ಸಾಮಾಜಿಕ ವಾಸ್ತವಾಂಶಗಳ ನಡುವೆ ಬದುಕುವ ಜೀವಂತ ವ್ಯಕ್ತಿ

ಯಾಗಿ ಕೂಡ ಹೆಣ್ಣು ಇಲ್ಲಿ ಗ್ರಹೀತವಾಗಿರುವ ಬಗೆ ಗಮನಾರ್ಹವಾದದ್ದು. ವ್ಯಕ್ತಿಯಾಗಿ ಕೆಲವರಿಗೆ ಬದುಕಲ್ಲಿ ಅನುಭವಕ್ಕೆ ಒದಗುವ ತಾರತಮ್ಯ, ವಂಚಿತರ ಸ್ಥಿತಿ. ಅದೇ ಹೊತ್ತಿನಲ್ಲಿ ಇತರರ ಸುಸ್ಥಿತಿಗಳನ್ನು ಒಟ್ಟೊಟ್ಟಿಗೆ ತಂದು ಜೋಡಿಸುವ ಮೂಲಕ ಕಾತ್ಯಾಯಿನಿ ಬದುಕಿನಲ್ಲಿರುವ ಬಿರುಕುಗಳು, ಅನ್ಯಾಯಗಳತ್ತ ಸೂಕ್ಷ್ಮವಾದ ಧ್ವನಿ ನೀಡುತ್ತಾರೆ. ಈ ಬಿರುಕುಗಳು ಅಥವಾ ಅನ್ಯಾಯಗಳ ಬಗ್ಗೆ ಆಕ್ರೋಶದ ಅಥವಾ ಘೋಷಿತ ಪ್ರತಿಭಟನೆಯ ದಾರಿಯನ್ನು ಅವರು ಆಯ್ದುಕೊಳ್ಳುವುದಿಲ್ಲ. ತಿದ್ದುವಿಕೆಗಿಂತ ಸಾಮರಸ್ಯಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಸುಖಕರವಾದ ಬದುಕಿಗೆ ಮಾನವರ ಚೇತನದಲ್ಲಿ ಎಂಥ ಹದ ಬೇಕು ಎಂಬುದು ಇವರ ಕತೆಗಳಲ್ಲಿ ಶೋಧಿತವಾಗುತ್ತದೆ.

ಬದುಕಲ್ಲಿ ತುಂಬಿರುವ ಮೌಢ್ಯ, ಸಂಕುಚಿತ ಬುದ್ಧಿ, ಮಾತ್ಸರ್ಯ, ದ್ವೇಷ, ಸಂಶಯ ಚಾಡಿ ಗುಣಗಳ ವಿನಾಶಾತ್ಮಕ ರೂಪಗಳನ್ನು ಕಾಣಿಸಿರುವ ಬಗೆಯಲ್ಲಿ ಸ್ತ್ರೀ ಅಥವಾ ಪುರುಷರೆಂಬ ಎಣಿಕೆಯೇನೂ ಇಲ್ಲ. ಆದರೆ ವಾತ್ಸಲ್ಯಪೂರ್ಣತೆ, ಕುಟುಂಬ ರಕ್ಷಕಶಕ್ತಿಯು ಸ್ತ್ರೀಯರಲ್ಲೇ ದಟ್ಟವಾಗಿರುವುದನ್ನು ಕಾತ್ಯಾಯಿನಿ ಕಾಣಿಸಲೆತ್ನಿಸುತ್ತಾರೆ. ಸಾವಿತ್ರಿ, ಗಂಗೆ, ಗೌರಿ, ಶಿವ, ರಾಮು, ಸೀತೆ, ಕಾಳಿ, ಭವಾಳ, ಮಾದೇವಿ ಮುಂತಾದ ಹೆಸರುಗಳು ಪುರಾಣ ಪ್ರತೀಕಗಳೂ ಆಗಿದ್ದು, ಸಾಂಪ್ರದಾಯಿಕ ಮೌಲ್ಯದ ಹೊರೆ ಹೊತ್ತಿರುವಂಥವು. ತಮ್ಮ ಕಥೆಗಳಲ್ಲಿ ಸಾಮಾನ್ಯಾತಿ ಸಾಮಾನ್ಯ ಸ್ತ್ರೀ ಪುರುಷರನ್ನು ಶಿಲ್ಪಿಸಲು ಈ ಪೌರಾಣಿಕ ಪ್ರತೀಕಗಳನ್ನು ಕಾತ್ಯಾಯಿನಿ ಬಳಸಿದ್ದರೂ ಒಪ್ಪಿತ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗಿ ಈ ದುಷ್ಟ ಪ್ರತೀಕಗಳನ್ನು ತರುವುದಿಲ್ಲ. ಬದಲಾಗಿ ವಾಸ್ತವದ ಸಮಾಜದಲ್ಲಿ, ವರ್ತಮಾನದಲ್ಲಿ ಬದುಕಿನೊಂದಿಗೆ ಹೋರಾಡುವ, ಒಪ್ಪಂದ ಮಾಡಿಕೊಳ್ಳುವ, ಸಿಡಿಯುವ ಜೀವಗಳ ಬದುಕಿಗೂ ಈ ಪುರಾಣ ಪ್ರತೀಕಗಳು ಬಿಂಬಿಸುವ ಅಂಶಕ್ಕೂ ಇರುವ ವ್ಯತ್ಯಾಸವನ್ನು ಧ್ವನಿಯ ಮೂಲಕ ಅಥವಾ ವಾಚ್ಯವಾಗಿ ಕೂಡ ಅವರು ಸೂಚಿಸುತ್ತಾರೆ. ನಿದರ್ಶನಕ್ಕಾಗಿ 'ಸಾವಿತ್ರೆ' ಮತ್ತು 'ಮಾದೇವಿ' ಕಥೆಗಳನ್ನು ಗಮನಿಸಬಹುದು.

'ಸಾವಿತ್ರೆ' ಕಥೆಯ ಕೇಂದ್ರದಲ್ಲಿರುವ ಹೆಣ್ಣು ಬಡತನ, ಒಲ್ಲದ ಮದುವೆ, ಜವಾಬ್ದಾರಿಯಿಲ್ಲದ ಗಂಡ, ಹೆತ್ತ ಮಕ್ಕಳ ಹೊಣೆ ಎಲ್ಲದರಿಂದ ಜರ್ಜರಿತಳಾಗಿ ತನ್ನ ಅಸಹಾಯಕತೆ, ಪರಾಧೀನತೆಗಳಿಂದಾಗಿ ಬೈದಾಡುವ, ಸಿಡುಕುವ ಅತೃಪ್ತ ವ್ಯಕ್ತಿ. ಆದರೆ ಹಿತೈಷಿಯೊಬ್ಬಳ ಪ್ರೇರಣೆಯಿಂದ ಓದು ಮುಂದುವರೆಸಿ, ಚಿಕ್ಕದೊಂದು ಕೆಲಸಗಳಿಸಿ ತನ್ನ ಸ್ವಾಭಿಮಾನಕ್ಕೆ ತಕ್ಕಂತೆ ಪರಾಧೀನತೆಯಿಂದ ಪಾರಾಗಿ ಹೇಗೋ ತನ್ನ ಹಾಗೂ ಮಕ್ಕಳ ಜೀವನ ಸಾಗಿಸಲು ಸಾಧ್ಯವಾದಾಗ ಗಂಡನ ಬೀಡಾಡಿತನವನ್ನು ಮನ್ನಿಸುವ ನೆಲೆ ತಲುಪುತ್ತಾಳೆ. ಕಥೆಯ ಕೊನೆಗೆ ಲೇಖಕಿ ಬರೆಯುತ್ತಾರೆ ! 'ಹೋದ ಪ್ರಾಣ ಬರೆಸಿದಳು ಗಂಡಂಗೆ ಆ ಸಾವಿತ್ರಿ. ಈ ಸಾವಿತ್ರಿ ಹಸಿದ ಹೊಟ್ಟೆಗೆ ಅನ್ನ ಕೊಟ್ಟಳು ಗಂಡ ಮಕ್ಕಳಿಗೆ' ಪುರಾಣದ ಸಾವಿತ್ರಿಯು ಪ್ರತಿನಿಧಿಸುವ 'ಪಾತಿವ್ರತ್ಯ'ದ ಪ್ರಭಾವಳಿ ಈ ಸಾವಿತ್ರಿಯ ಬದುಕಲ್ಲಿ ಕರಗಿಹೋಗಿ ಮಾನವೀಯ ಅನುಕಂಪದ ನೆಲೆಯಾಗಿ ಮಾರ್ಪಡುತ್ತದೆ. ತನ್ನ ಸ್ವಾಭಿಮಾನವನ್ನು ಕಾಯ್ದುಕೊಳ್ಳಲು, ತನ್ನ ಕರುಳಿನ ಕುಡಿಗಳನ್ನು ಸಾಯಗೊಡದಂತೆ ಕಾಯಲು. ಬಿಟ್ಟಿದ್ದ ಓದು ಪೂರೈಸುವ, ಗಳಿಕೆಗೆ ಒಂದು ಉದ್ಯೋಗ ಹಿಡಿವ ಈ ಸಾವಿತ್ರಿಯ ಛಲದ ಬಗ್ಗೆ ಮೆಚ್ಚುಗೆಯ ಧ್ವನಿ ಇಲ್ಲದ. ಗಂಡ ಹೇಗಾದರೂ ಬದುಕಿದ್ದರೆ ಸಾಕು ಎಂಬುದೇ ಹೆಣ್ಣಿನ ಸೌಭಾಗ್ಯ ಎಂಬ ಪುರಾಣ ಕೂಡ ಸೂಕ್ಷ್ಮವಾಗಿ ಇಲ್ಲಿ ಭಗ್ನವಾಗುತ್ತದೆ.

ಪ್ರಾಚೀನ ಮೌಲ್ಯಗಳಲ್ಲಿನ ಅಸಾಂಗತ್ಯ, ಅನ್ಯಾಯಕರ ಅಂಶಗಳನ್ನು ಸೂಕ್ಷ್ಮವಾಗಿ ವಿವೇಚಿಸಲು ಕಾತ್ಯಾಯಿನಿ ಗ್ರಾಮೀಣ ನೆಲೆಯಿಂದ ವಸ್ತುಗಳನ್ನು ಆರಿಸಿಕೊಳ್ಳುತ್ತಾರೆ. ವಿವಾಹ ಸಂಸ್ಥೆ, ಸ್ತ್ರೀಪುರುಷ ಸಂಬಂಧ, ಸಂತಾನದ ಬಯಕೆಯಂಥ ವಸ್ತುಗಳನ್ನು ವ್ಯಕ್ತಿಗಳ ಅಂತರಂಗದ ಪ್ರವೃತ್ತಿಗಳ ನೆಲೆಯಿಂದ ವಿವೇಚಿಸುವ ಯತ್ನ ಇವರ ಕಥೆಗಳಲ್ಲಿ ಎದ್ದು ತೋರುತ್ತದೆ. 'ಮಾಲಾ' ಮತ್ತು 'ರಂಗು' ಕಥೆಗಳೆಡೂ ಸಂತಾನಕ್ಕಾಗಿ ತುಡಿವ, ಆ ಮೂಲಕ ತಮ್ಮ ಹೆಣ್ಣುತನದ ಸಾರ್ಥಕತೆ ಕಾಣಬಯಸುವ ವ್ಯಕ್ತಿಗಳ ವೃತ್ತಾಂತಗಳು, ಸುಶಿಕ್ಷಿತತೆ, ಅನಾನುಕೂಲಕರವಾದ ಪತಿ, ಆರ್ಥಿಕ ಸವಲತ್ತುಗಳೆಲ್ಲ ಇದ್ದರೂ 'ಬಂಜೆ' ಎಂಬ ಸಾಮಾಜಿಕ ನಿಂದನೆಯಿಂದ ಪಾರಾಗಲು ಮಾಲಾ ನಡೆಸುವ ಯತ್ನಗಳು ಒಂದೆರಡಲ್ಲ, ಕೊನೆಗೂ ಒಂದು ಗಂಡು ಮಗು ಹೆತ್ತಾಗಲೇ ಅವಳ ಸಂಕಟಕ್ಕೆ ಪರಿಹಾರ. ರಂಗುವಿನ ಸ್ಥಿತಿ ಇದಕ್ಕೆ ತದ್ವಿರುದ್ಧ. ಅವಳ ಬಯಕೆ ಬಡತನ, ಅಜ್ಞಾನ, ಸಂವೇದನಾರಹಿತ ಪತಿ ಮತ್ತು ಮಾವರಿಂದ ಹತ್ತಿಕ್ಕಲ್ಪಟ್ಟು, ಆ

ಒತ್ತಡ ಮಿತಿಮೀರಿದಾಗ ಮನೋರೋಗವಾಗಿ ಆಸ್ಫೋಟಿಸುತ್ತದೆ. ಈ ಎರಡೂ ಕಥೆಗಳಲ್ಲಿ ಜನರ ನಿರೀಕ್ಷಿತ ಮೌಲ್ಯಗಳ ಒತ್ತಡಕ್ಕೆ ಬಲಿಯಾಗುವ ಹೆಣ್ಣಿನ ಮಾನಸಿಕ ಯಾತನೆಗಳನ್ನು ದಾಖಲಿಸುತ್ತಾರೆ ಲೇಖಕಿ. ಆದರೆ ಕಥೆಯ ನಾಯಕಿಯರ ಸಮಸ್ಯೆ ಹೇಗೇ ಪರಿಹಾರ ಕಾಣಲಿ, ಕಥೆ ಕೇಳುವ ಪ್ರಶ್ನೆ ನಂತರವೂ ಉಳಿಯುತ್ತದೆ.

'ಮಾದೇವಿ' ಕಥೆಯಲ್ಲಿ ಹೆಣ್ಣು–ಗಂಡಿನ ಪ್ರೇಮ, ನಿಷ್ಠೆ ದಾಂಪತ್ಯದ ನಿಜವೇನೆಂಬುದರ ಹುಡುಕಾಟವನ್ನು ಕಾಣುತ್ತೇವೆ. ರಾಮ–ಸೀತೆಯರ ಹೋಲಿಕೆಯೊಂದಿಗೆ ಪ್ರಾರಂಭವಾಗುವ ಕೆಂಪ-ಮಾದೇವಿಯರ ಪ್ರೀತಿ, ಒಗೆತನ, ಸಹಕಾರ ತುಂಬಿದ್ದ ದಾಂಪತ್ಯ–ಹೆರವರ ಚಾಡಿ ಮಾತಿನಿಂದಾಗಿ ಬಿರಿದು ಹೋದಾಗ ಮಾದೇವಿಯ ನಿಷ್ಠೆ ಮಾತ್ರ ಮೊದಲಿನಂತೆ ಉಳಿದು, ಕೆಂಪನ ದಾರಿ ಬದಲಾಗುತ್ತದೆ. ವೈಧವ್ಯಕ್ಕೆ ಒಳಗಾದ ಯುವತಿಯೊಬ್ಬಳ ಮಾನಸಿಕ ಬೆಳವಣಿಗೆಯನ್ನು ಚಿತ್ರಿಸುವ 'ರೇಖಾ' ಚಿತ್ರಗಾರಳೊಬ್ಬಳ ಸಂವೇದನೆಗಳ ಮೂಲಕ ಆಕೆಯ ಗತಿಸಿದ ಪ್ರೇಮದ ನೆನೆಪನ್ನು, ಅದರ ಮೂಲಕ ಆಕೆಯ ಮನೋವಿಕಾಸವನ್ನು ಚಿತ್ರಿಸುವ ಚಿತ್ರಾ, ದೇಶಭಕ್ತಿಯ ಸಮಾಜ ಸೇವೆಗಳಲ್ಲಿ ತೊಡಗಿದ ಆದರ್ಶವಾದಿಯೊಬ್ಬಳು ಅಧಿಕಾರದಾಹ, ಭ್ರಷ್ಟ ರಾಜಕೀಯಗಳಿಂದ ಅನುಭವಿಯಾಗುವ ಬಗೆಯನ್ನು ದಾಖಲಿಸುವ 'ಕರುಣಾ', ತಾಯಿ ಹೃದಯದ ವಿಶಾಲತೆಯನ್ನು ದಾಖಲಿಸುವ ಹೃದಯಂಗಮ ಚಿತ್ರಗಳಾದ 'ಕಾಳಿ' ಮತ್ತು 'ಸರ್ವಜ್ಞೆ' ಯಂಥ ಅನೇಕ ಸತ್ವಯುತ ಕಥೆಗಳನ್ನು ಕಾತ್ಯಾಯಿನಿ ತಮ್ಮ ಎರಡು ಸಂಕಲನಗಳ ಮೂಲಕ ನೀಡಿದ್ದಾರೆ. ಈ ಎಲ್ಲ ಕಥೆಗಳಲ್ಲಿ ಕಥೆ ಹೇಳುವ ಬಗೆ, ನಿರ್ವಹಣೆ, ತಂತ್ರಗಳಲ್ಲಿ ಹೊಸತನದ ಹುಡುಕಾಟ ಉದ್ದಕ್ಕೂ ಕಂಡು ಬರುತ್ತದೆ.

ಎಂಬತ್ತರ ದಶಕದಲ್ಲಿ ಅವರು ಪ್ರಕಟಿಸಿದ 'ಗಂಗಾತರಂಗ' ನಿಜವಾದ ಅರ್ಥದಲ್ಲಿ ಒಂದು ಕಾದಂಬರಿ ಎನ್ನುವಂಥ ಕಥೆಯ ಸೂತ್ರಕ್ಕೆ ಬದ್ಧವಾದುದಲ್ಲ. ಅನೇಕ ಹೆಣ್ಣು–ಗಂಡುಗಳ ಸಂಬಂಧಗಳ ಒಳ–ಹೊರಗುಗಳನ್ನು ಗಂಗೆಯ ಮನೋತರಂಗಗಳ ಮೂಲಕ ದಾಖಲಿಸುವ ಮೂಲಕ ಸಮರ್ಪಕವಾದ ಸಮಗ್ರವಾದ ಮಾನವೀಯ ಪ್ರೇಮದ ಸ್ವರೂಪವನ್ನು ಹುಡುಕಾಡುವ ಯತ್ನವನ್ನು ಇದರಲ್ಲಿ ಕಾಣಬಹುದು, ಈ ಕಾದಂಬರಿಯ ಮುಖ್ಯ ಚಿಂತನೆ ನಡೆಯುವುದು ಗಂಗೆಯ ಮನದಲ್ಲಿ. ಆದರೆ ಪ್ರವಾಹ ಪತಿತರಾದ, ಪರಿಸ್ಥಿತಿ ಹಾಗೂ ಪ್ರವೃತ್ತಿಗಳ ವಶರಾದ, ಅಸಹಾಯಕರಾದ ಅನೇಕ ಸ್ತ್ರೀಯರು ಇವಳ ಬದುಕಿನ ಪರಿಧಿಯಲ್ಲಿ ಬಂದು ತರಂಗಗಳನ್ನು ಎಬ್ಬಿಸುತ್ತಾರೆ. ಇವರಲ್ಲಿ ಬಹಳಷ್ಟು ಹೆಣ್ಣುಗಳು ತಮ್ಮ ಬದುಕಿನ ಗುರಿ, ಅರ್ಥಗಳನ್ನು ಚಿಂತಿಸಲೂ ಸಾಮರ್ಥ್ಯವಿಲ್ಲದವರು. ಬದುಕ ಬರ್ಭರವಾದಾಗ ಧೈರ್ಯಗೆಟ್ಟು ಆತ್ಮಹತ್ಯೆಗೆ ಯತ್ನಿಸುವ, ಕೊರಗಿ ಪ್ರಾಣ ಬಿಡುವ ಅಥವಾ ವಿರಾಗಿಣಿಯರಾಗಿ ಜನರ ಸೇವೆಗೆ ತೊಡಗುವವರು.ಆದರೆ ಇಂಥ ಹೆಣ್ಣುಗಳ ಸರಣಿಯಲ್ಲಿ ಎದ್ದು ತೋರುವ ಪ್ರಮುಖ ಚೇತನ ಸೂಲಗಿತ್ತಿ ಮಂಜಿಯದು.

ಬದುಕಿಗೆ ತುಂಬ ಶ್ರದ್ಧೆಯಿಂದ ತೆರೆದುಕೊಳ್ಳುವ ಎಲ್ಲ ಜೀವಂತಿಕೆಯ ಪ್ರತೀಕವಾದ ಈ ಮಂಜಿಯ ಅನುಭವದಿಂದ ಮದುವೆ, ಹಾಗೂ ತಾಯ್ತನ ಕುರಿತಂತೆ ಇರುವ ಸಾಂಪ್ರದಾಯಿಕ ನಂಬಿಕೆಗಳನ್ನು ಲೇಖಕಿ ಪ್ರಶ್ನೆಗೊಳಗು ಮಾಡುವ ಬಗೆ ವಿಶೇಷವಾದದ್ದು. 'ಮೈಗಿಂತ ಮನಸ್ಸು ಮುಖ್ಯ' 'ಜನ ಕಂಡರೇನು ? ಕಾಣದಿದ್ದರೆ ಏನು ? ಒಪ್ಪಿದರೇನು ? ಒಪ್ಪದಿದ್ದರೆ ಏನು ? ತಾಳಿ ಕಟ್ಟಿದರೇ ಗಟ್ಟೀನಾ ? ತಾಳಿ ಕಟ್ಟಿದಾಗ ಮನಸ್ಸು ಹದಕ್ಕೆ ಬರುತ್ತದೆಯೇ ಹೊರತು ಮೈ ಏನಾಗುತ್ತೆ' 'ಮಗು ಮಾಡುವಾಗ, ಎರಡು ಮನಸ್ಸೂ ಮಗು ಬೇಡಿದ್ದರೆ, ಮದುವೆ ಆಗಿದ್ದು ಬಿಟ್ಟಿದ್ದು ಏನು ಯತ್ವಾಸ ಅವ್ವಾ ?' ಎಂಬ ಮಂಜಿಯ ಪ್ರಶ್ನೆಗಳು ಈ ಕಾದಂಬರಿ ಎತ್ತುವ ಅನೇಕ ಪ್ರಶ್ನೆಗಳಲ್ಲಿ ಕೆಲವು ಮಾತ್ರ.

ಒಟ್ಟಾಗಿ ನೋಡುವಾಗ ಕಾತ್ಯಾಯಿನಿಯವರ ಸ್ತ್ರೀ ಚಿತ್ರಣಗಳು ಸಾಂಪ್ರದಾಯಿಕ ಬದುಕಿನಿಂದ ಸಿಡಿದೇನೂ ಹೋಗುವುದಿಲ್ಲ. ಬದಲಾಗಿ ಬದುಕಿನಲ್ಲಿ ಒಂದು ಸಂತುಲನ, ಸಾಮರಸ್ಯ ಹೇಗೆ ಸಾಧ್ಯ ಎಂಬುದರತ್ತಲೇ ಇಲ್ಲಿ ಹೆಚ್ಚು ಒತ್ತು ಇರುವುದನ್ನು ಕಾಣುತ್ತೇವೆ. ಹೆಣ್ಣಿನ ಸಹಜ ಸ್ವಭಾವ ಪ್ರಧಾನವಾಗಿ ಜೀವಪರವಾದದ್ದು ಜೀವ ರಕ್ಷಕವಾದದ್ದು, ಮಾನವ ಸಂತಾನವನ್ನು ಉಳಿಸಿಡಬಲ್ಲ ಜೀವದಾಯಕ ಶಕ್ತಿ ಎಂಬುದನ್ನು ಸಾಕಾರವಾಗಿಸುವ ಮಂಜಿ. ಸರ್ವಜ್ಞೆ, ಸಾವಿತ್ರಿ, ಮಾದೇವಿಯಂಥ ವಿಶಿಷ್ಟ ಸ್ತ್ರೀ ವ್ಯಕ್ತಿತ್ವಗಳನ್ನು ನೀಡಿ ಕಾತ್ಯಾಯಿನಿಯವರು ತಮ್ಮ ಹೆಸರನ್ನು ಶಾಶ್ವತವಾಗಿ ಚರಿತ್ರೆಯಲ್ಲಿ ಉಳಿಸಿದ್ದಾರೆ.

ಮಹಿಳೆ ಮತ್ತು ಸ್ಯಾಟಲೈಟ್ ಟಿವಿ

—ಜಿ. ಎನ್. ಮೋಹನ್

ಜಿ. ಎನ್. ಮೋಹನ್‌ರವರ ನವಕರ್ನಾಟಕ ಪ್ರಕಾಶನದ ಪ್ರಕಟಣೆಯಾದ ಡಂಕೆಲ್ ಪ್ರಸ್ತಾವನೆಯ ಬೆಳಕಿನಲ್ಲಿ ಸ್ಯಾಟಲೈಟ್ ಟಿ.ವಿ. ಪುಸ್ತಕದಿಂದ ಆಯ್ದ ಒಂದು ಅಧ್ಯಾಯವಿದು.

''ದೂರದರ್ಶನದಲ್ಲಿ ಪ್ರಸಾರವಾಗುವ ಚಿತ್ರ, ಹಾಡುಗಳಿಂದಾಗಿ ಮಹಿಳೆಯರನ್ನು ಚುಡಾಯಿಸುವುದು ಅತ್ಯಂತ ಹೆಚ್ಚಾಗಿದೆ. ಬೀದಿಯಲ್ಲಿ ಓಡಾಡುವುದೂ ಕಷ್ಟ ಎನ್ನುವ ಪರಿಸ್ಥಿತಿ ಉಂಟಾಗಿದೆ. ಬೀದಿಯಲ್ಲಿ ಹೋಗುವಾಗ ಹಿಂದೆ ಬಿದ್ದು ಅಶ್ಲೀಲ ಪದಗಳನ್ನು ನಮ್ಮತ್ತ ತೂರುತ್ತಾರೆ. ಕಿರುತೆರೆಯಲ್ಲಿ ತೋರಿಸುವ ರೀತಿಯಲ್ಲಿಯೇ ಎಲ್ಲಾ ಮಹಿಳೆಯರು ಇರುತ್ತಾರೆ ಎಂದು ಗಂಡಸರು ಭಾವಿಸಿದಂತಿದೆ'' ಎಂದು ವಿದ್ಯಾರ್ಥಿನಿಯರು ತಮಗಾಗುತ್ತಿರುವ ನೋವನ್ನು ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗ, ಸಮೂಹ ಅಧ್ಯಯನ ಕೇಂದ್ರ, ಮಾಧ್ಯಮ ಪ್ರಸರಣಾ ತಂಡಗಳು, 'ಕಿರುತೆರೆಯಲ್ಲಿ ಅಶ್ಲೀಲತೆ ಮತ್ತು ಹಿಂಸೆ' ಕುರಿತು ದೆಹಲಿಯಲ್ಲಿ ನಡೆಸಿದ ಸಮೀಕ್ಷೆ ಸ್ಯಾಟಲೈಟ್ ಟಿವಿ ಚಾನಲ್‌ಗಳು, ಇದರಿಂದ ಪ್ರೇರೇಪಣೆಗೊಂಡ ದೂರದರ್ಶನದ ಚಾನಲ್‌ಗಳು, ಬದಲಾಗಿರುವ ಹಿಂದಿ ಚಿತ್ರರಂಗ ಮಹಿಳೆಯರನ್ನು ಕೀಳಾಗಿ, ಭೋಗದ ವಸ್ತುವಾಗಿ ಕಾಣುವುದನ್ನು ಮತ್ತಷ್ಟು ಪ್ರೇರೇಪಿಸಿದೆ ಎಂಬುದರ ಸ್ಪಷ್ಟ ಚಿತ್ರಣವನ್ನು ಕೊಟ್ಟಿದೆ.

ಸೆನ್ಸಾರ್ ಆದ ನಂತರವೇ ಸ್ಯಾಟಲೈಟ್ ಟಿವಿಯ ಕಾರ್ಯಕ್ರಮಗಳು ಭಾರತ ಪ್ರವೇಶಿಸಬೇಕು ಎಂದು ಬಿಗಿ ಮಾತುಗಳನ್ನು ಆಡುವ ಸರ್ಕಾರ ಸ್ಯಾಟಲೈಟ್ ಚಾನಲ್‌ಗಳ ಮಾತು ಹಾಗಿರಲಿ ತನ್ನ ದೂರದರ್ಶನ ಚಾನಲ್‌ಗಳಲ್ಲಿಯೇ ಸೆನ್ಸಾರ್ ಬಿಗಿ ನೀತಿಯನ್ನು ಅಳವಡಿಸುವುದಿಲ್ಲ. ಸ್ಯಾಟಲೈಟ್ ಟಿವಿ ಧಾರಾಳವಾಗಿ ತೋರಿಸುತ್ತಿರುವ ಅಶ್ಲೀಲ ಚಿತ್ರಗಳಿಗೆ ನೋಡುಗರು ಎಲ್ಲಿ ಮಾರು ಹೋಗುತ್ತಾರೋ ಎಂಬ ಭಯದಿಂದ ದೂರದರ್ಶನದ ಚಾನಲ್‌ಗಳೂ ಮತ್ತೆ ಇಂತಹ ಕಾರ್ಯಕ್ರಮಗಳಿಗೆ ಮೊರೆ ಹೋಗುವಂತೆ ಮಾಡಿವೆ. ಈ ಕಾರಣಕ್ಕಾಗಿಯೇ ಸ್ಟಾರ್‌ನಿಂದ ಹೊರದಬ್ಬಲ್ಪಟ್ಟ ಎಂಟಿವಿ ಸಂಗೀತ ಚಾನಲ್‌ಗೆ ದೂರದರ್ಶನ ಆಹ್ವಾನ ನೀಡುತ್ತಿದೆ. ಪ್ರಪ್ರಥಮ ಬಾರಿಗೆ ವಿದೇಶಿ ಚಾನಲ್‌ನ್ನು ಭಾರತದ ನೋಡುಗರಿಗೆ ಕೊಟ್ಟ ಹೆಮ್ಮೆಯನ್ನು ಸಾರುತ್ತದೆ.

ದೂರದರ್ಶನದ ಸೆನ್ಸಾರ್ ಕಾನೂನುಗಳು ಈ ಮೊದಲಿನಿಂದಲೂ ರಂಗೋಲೆಯ ಕೆಳಗೆ ತೂರುವವರಿಗೆ ಧಾರಾಳ ಅವಕಾಶಗಳನ್ನು ಮಾಡಿಕೊಟ್ಟಿದೆ. ಸಂಸತ್ತಿನಲ್ಲಿ ಮಂಡಿಸಲಾದ 'ಮಹಿಳೆಯರನ್ನು ಅಸಭ್ಯವಾಗಿ ಚಿತ್ರಿಸುವುದರ ನಿಷೇಧ ಮಸೂದೆ-1986'ರ ನಂತರ ಮತ್ತೆ ದೂರದರ್ಶನವನ್ನು ಗಮನದಲ್ಲಿಟ್ಟುಕೊಂಡು 'ದೂರದರ್ಶನ ಜಾಹಿರಾತು ನೀತಿ ಸಂಹಿತೆ'ಯನ್ನು ಮಂಡಿಸಿತು. ಅತ್ಯಂತ ಕ್ರಾಂತಿಕಾರಿ ಎಂದು ಸರ್ಕಾರದಿಂದ ಬಣ್ಣಿಸಲ್ಪಟ್ಟ ಈ ನೀತಿ ಸಂಹಿತೆ ಕೇವಲ ಜಾಹಿರಾತಿನ ಬಗ್ಗೆ ಮಾತ್ರ ಮಾತನಾಡುತ್ತದೆಯೇ ಹೊರತು ಜಾಹಿರಾತಿನಷ್ಟೇ ಅಥವಾ ಅದನ್ನೂ ಮೀರಿ ಮಹಿಳೆ

'ದೂರದರ್ಶನದಲ್ಲಿ ಪ್ರಸಾರವಾಗುವ ಚಿತ್ರ, ಹಾಡುಗಳಿಂದಾಗಿ ಮಹಿಳೆಯರನ್ನು ಚುಡಾಯಿಸುವುದು ಅತ್ಯಂತ ಹೆಚ್ಚಾಗಿದೆ. ಬೀದಿಯಲ್ಲಿ ಓಡಾಡುವುದೂ ಕಷ್ಟ ಎನ್ನುವ ಪರಿಸ್ಥಿತಿ ಉಂಟಾಗಿದೆ. ಬೀದಿಯಲ್ಲಿ ಹೋಗುವಾಗ ಹಿಂದೆ ಬಿದ್ದು ಅಶ್ಲೀಲ ಪದಗಳನ್ನು ನಮ್ಮತ್ತ ತೂರುತ್ತಾರೆ. ಕಿರುತೆರೆಯಲ್ಲಿ ತೋರಿಸುವ ರೀತಿಯಲ್ಲಿಯೇ ಎಲ್ಲಾ ಮಹಿಳೆಯರು ಇರುತ್ತಾರೆ ಎಂದು ಗಂಡಸರು ಭಾವಿಸಿದಂತಿದೆ' ಎಂದು ವಿದ್ಯಾರ್ಥಿನಿಯರು ತಮಗಾಗುತ್ತಿರುವ ನೋವನ್ನು ವ್ಯಕ್ತಪಡಿಸಿದ್ದಾರೆ.

ಯರನ್ನು ಅಸಭ್ಯವಾಗಿ ಚಿತ್ರಿಸುತ್ತಿರುವ ದೂರದರ್ಶನದಲ್ಲಿ ಪ್ರಸಾರವಾಗುವ ಚಲನಚಿತ್ರಗಳು, ಧಾರಾವಾಹಿಗಳು, ಹಾಗೂ ಇತರೇ ಕಾರ್ಯಕ್ರಮಗಳನ್ನು ಈ ಕಾಯಿದೆಯು ವ್ಯಾಪ್ತಿಗೆ ತರುವುದೇ ಇಲ್ಲ. ಇದಕ್ಕಿಂತಲೂ ಹೆಚ್ಚಾಗಿ ದೂರದರ್ಶನ ಜಾಹಿರಾತುದಾರರಿಗೆ ನೀತಿ ಸಂಹಿತೆ ಒದಗಿಸಿಕೊಟ್ಟರೂ ಯಾವ ಜಾಹಿರಾತುಗಳೂ ಮಹಿಳೆಯನ್ನು ಅಸಭ್ಯವಾಗಿ ಚಿತ್ರಿಸುವುದನ್ನು ನಿಲ್ಲಿಸಲಿಲ್ಲ,

ಮಹಿಳೆಯನ್ನು ಚಲನಚಿತ್ರಗಳಲ್ಲಿ, ಧಾರಾವಾಹಿಗಳಲ್ಲಿ ಅಸಭ್ಯವಾಗಿ ಚಿತ್ರಿಸುವುದು ಹೆಚ್ಚುತ್ತಿರುವ ವೇಳೆಯೇ ಮಹಿಳೆ ಸಮಾಜದ ಮುನ್ನಡೆಯಲ್ಲಿ ಪಾಲುದಾರಳು ಎಂಬ ಅಂಶವನ್ನು ದೂರದರ್ಶನವೂ ಮರೆಯಿತು. ದೂರದರ್ಶನ ಕಾರ್ಯಕ್ರಮಗಳಲ್ಲಿ ಲಿಂಗ ತಾರತಮ್ಯ ಕುರಿತು ನಡೆಸಲಾದ ಅಧ್ಯಯನವು ವಾರ್ತಾ ಪ್ರಸಾರಗಳಲ್ಲಿ ಮಹಿಳೆಗೆ 2.5 ನಿಮಿಷ ಮಾತ್ರ ಅವಕಾಶ ನೀಡಲಾಗಿತ್ತು ಎಂಬುದನ್ನು ಬಹಿರಂಗಪಡಿಸಿತು. ಈ ಸುದ್ದಿಯ ತುಣುಕುಗಳೂ ಬಹುತೇಕ ವೇಳೆ ಮಹಿಳಾ ಮಂತ್ರಿಗಳ ಕಾರ್ಯಕ್ರಮವಾಗಿರುತ್ತಿತ್ತು. (–ಅನಿತಾ ಡಿಗೆ, ಪ್ರಭಾಕೃಷ್ಣನ್, ಪೂರ್ಣಿಮಾ ರಾವ್) "ದೂರದರ್ಶನದಲ್ಲಿ ಮಹಿಳೆ : ಬದಲಾದ ನೋಟ'' ಅಧ್ಯಯನವು ದೂರದರ್ಶನದಲ್ಲಿ ಮಹಿಳೆಯನ್ನು ಸರಿಯಾಗಿ ಚಿತ್ರಿಸಿಲ್ಲ. ಆಕೆ ಕಿರುತೆರೆಯಲ್ಲಿ ಅಲ್ಲಿಂದ ಇಲ್ಲಿಗೆ ಓಡಾಡುವ ಗೊಂಬೆ ಮಾತ್ರವಾಗಿದ್ದಾಳೆ. ತಯಾರಾದ ಕಾರ್ಯಕ್ರಮವೂ ಕೂಡಾ ಮಹಿಳೆ ನಾಲ್ಕು ಕೋಣೆಗೆ ಮೀಸಲು ಎಂಬುದನ್ನೇ ಮತ್ತಷ್ಟು ಗಟ್ಟಿಗೊಳಿಸುತ್ತದೆ ಎಂಬುದನ್ನು ಮಂಡಿಸಿತು. (–ನಂದಿನಿ ಪ್ರಸಾದ್)

ಕಿರುತೆರೆಯ ಕಾರ್ಯಕ್ರಮಗಳು ಸ್ಯಾಟಲೈಟ್ ಟಿವಿ ಚಾನಲ್‌ಗಳಿಂದಾಗಿ ಈಗ ಮತ್ತಷ್ಟು 'ಸೆಕ್ಸಿ'ಯಾಗಿವೆ. ಸೆಕ್ಸಿ ಸೆಕ್ಸಿ ಹಾಡುಗಳು ಜನರ ಅಭಿರುಚಿ ಬಹುಮನ್ನಣೆಯ ಹಾಡಾಗಿ ಹಲವಾರು ತಿಂಗಳು ವಿಜೃಂಭಿಸುತ್ತವೆ. ಕಿರುತೆರೆ ಬಳಸುವ ಭಾಷೆಯ ಬಗ್ಗೆ ಸಾಮಾಜಿಕ ಕಾರ್ಯಕರ್ತೆ ಜಯಾ ಜೈಟ್ಲಿ ಆತಂಕ ವ್ಯಕ್ತಪಡಿಸುತ್ತಾರೆ. ಮಿಲಿಟ್ ಪೆಪ್ಪರ್‌ಮೆಂಟ್‌ನಿಂದ ಹಿಡಿದು ಜೀನ್ಸ್ ಪ್ಯಾಂಟ್‌ವರೆಗಿನ ಜಾಹಿರಾತುಗಳು ಹೆಣ್ಣನ್ನು ಕೀಳಾಗಿ ಸಂಭೋದಿಸುವುದನ್ನು ಕಲಿಸುತ್ತವೆ. ಮುಕ್ತ ಮಾರುಕಟ್ಟೆಯ ಭರಾಟೆಯಲ್ಲಿ ಹೆಣ್ಣು ನಲುಗುವಂತಾಗಿದ್ದಾಳೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಸ್ಯಾಟಲೈಟ್ ಟಿವಿಗಳು ಅತ್ಯಂತ ವಿವರವಾಗಿ ತೋರಿಸುವ ಅತ್ಯಾಚಾರದ ದೃಶ್ಯಗಳು ಮಕ್ಕಳ ಮತ್ತು ಯುವಕರ ಮನಸ್ಸಿನ ಮೇಲೆ ಗಂಭೀರ ಪರಿಣಾಮಗಳನ್ನುಂಟುಮಾಡುತ್ತದೆ ಎಂಬ ಆತಂಕವನ್ನು ಪೋಷಕರು ದೆಹಲಿಯ ಸಮೀಕ್ಷೆಯಲ್ಲಿ ವ್ಯಕ್ತಪಡಿಸಿದ್ದಾರೆ. ಮುಷ್ಟಿಯುದ್ಧ, ಸಿಕ್ಕಿದ್ದನ್ನೆಲ್ಲಾ ಚಚ್ಚುವುದನ್ನು ಪದೇ ಪದೇ ನೋಡಿರುವ ನಾವು ಒಂದು ದಿನ ಮುಂದೇನಾಗುವುದೆಂಬ ಅರಿವಿಲ್ಲದೆ ಇನ್ನೊಬ್ಬರನ್ನು ಚಾಕುವಿನಿಂದ ಇರಿದರೂ ಆಶ್ಚರ್ಯವಿಲ್ಲ ಎಂದು ಬಡ ಕುಟುಂಬದ ಯುವಕನೊಬ್ಬ ಈ ಸಮೀಕ್ಷೆಯಲ್ಲಿ ತಿಳಿಸಿದ್ದಾನೆ.

ಸ್ಯಾಟಲೈಟ್ ಟಿವಿ ಚಾನಲ್‌ಗಳು ಉಂಟುಮಾಡುವ ಈ ಪರಿಣಾಮದ ಬಗ್ಗೆಯೇ ಅರ್ಥಶಾಸ್ತ್ರಜ್ಞ ಅಶೋಕ್ ಮಿತ್ರಾ ಗಮನ ಸೆಳೆಯುತ್ತಾರೆ. ಹಲವು ಬೇಕುಗಳನ್ನು ಸೃಷ್ಟಿಸಿದ ಚಾನಲ್‌ಗಳು ಉಳ್ಳವರಿಗೆ ಮತ್ತಷ್ಟು ಕೊಳ್ಳಲು ಪ್ರೋತ್ಸಾಹಿಸುವಂತೆಯೇ ಬಡವರಲ್ಲೂ ಹಂಬಲಗಳನ್ನು ಹುಟ್ಟುಹಾಕುತ್ತದೆ. ಸ್ಯಾಟಲೈಟ್ ಚಾನಲ್ ಹುಟ್ಟುಹಾಕುವ ಲೈಂಗಿಕ ಹಸಿವನ್ನು ತಣಿಸಿಕೊಳ್ಳಲು ಬೆಗ್ ಬಾಲೋ ಆರ್ ಸ್ಟೀಲ್ ವಿಧಾನಗಳನ್ನು ಮೀರಿ ಕೊಲೆಮಾಡಿಯಾದರೂ ಅತ್ಯಾಚಾರ ಮಾಡಿಯಾದರೂ ತಮ್ಮ ಬೇಕುಗಳನ್ನು ತಣಿಸಿಕೊಳ್ಳುವುದು ಜೀವನ ವಿಧಾನವಾಗಿ ಬಿಡುತ್ತದೆ ಎಂದು ಕಳವಳ ವ್ಯಕ್ತಪಡಿಸುತ್ತಾರೆ.

ಅತ್ಯಾಚಾರದ ಸಂಖ್ಯೆಯೂ ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಏರುತ್ತಲೇ ಹೋಗುತ್ತಿದೆ.

ಈ ಸೆಕ್ಸಿನ ಹಸಿವನ್ನು ತಣಿಸಲೆಂದೇ ವೇಶ್ಯಾವಾಟಿಕೆಗಳೂ ಭಾರೀ ಸಂಖ್ಯೆಯಲ್ಲಿ ತಲೆ ಎತ್ತುತ್ತಿವೆ, ಎಳೆಯ ಬಾಲಕಿಯರನ್ನು ಕದ್ದು ವೇಶ್ಯಾವಾಟಿಕೆಗಳಿಗೆ ಮಾರುವ ಆರ್ಥಿಕ ಸಂಕಷ್ಟದಲ್ಲಿ ಬಳಲುತ್ತಿರುವವರು ಅನಿವಾರ್ಯವಾಗಿ ವೇಶ್ಯಾವಾಟಿಕೆಗೆ ಮೊರೆ ಹೋಗುವ ಸಂದರ್ಭಗಳನ್ನು ಈ ಮುಕ್ತ ಮಾರುಕಟ್ಟೆ ಸೃಷ್ಟಿಸಿದೆ.

ವಿದೇಶಿ ವಿನಿಮಯದ ಆಸೆಯಿಂದ ಪ್ರವಾಸೋದ್ಯಮಕ್ಕೆ ಈಗ ಇನ್ನಿಲ್ಲದಂತೆ ಸರ್ಕಾರ ಒತ್ತುಕೊಡುತ್ತಿದೆ. ಪ್ರವಾಸೋದ್ಯಮ ಲೈಂಗಿಕ ಪ್ರವಾಸೋದ್ಯಮವಾಗಿ ಬದಲಾದ ಹಲವಾರು ನಿದರ್ಶನಗಳು ನಮ್ಮ ಮುಂದಿವೆ. ಮೂರನೇ ಜಗತ್ತಿನ ರಾಷ್ಟ್ರಗಳು ಬೇಗನೆ ಈ ಸೆಕ್ಸ್ ಟೂರಿಸಂ ಕ್ಷೇತ್ರಗಳಾಗಿ ಬದಲಾಗಿವೆ. ನಮ್ಮ

ಕಡಲ ದಂಡೆಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಲು ಉತ್ಸುಕರಾಗಿರುವ ಸರ್ಕಾರ ಟೂರಿಸಂನ ಹೆಸರಿನಲ್ಲಿ ಮಹಿಳೆಯರನ್ನು ಅತ್ಯಾಚಾರಕ್ಕೆ ಪ್ರೋತ್ಸಾಹಿಸುತ್ತಿದ್ದೇವೆ ಎಂಬುದನ್ನು ಬೇಕೆಂದೇ ಮರೆಮಾಡಲು ಇಚ್ಛಿಸುತ್ತದೆ. ವಿದೇಶೀ ಕಂಪನಿಗಳಿಗೆ ತಮ್ಮ ಕಡಲ ದಂಡೆಗಳನ್ನು ಮಾರಿದ ಅನೇಕ ಬಡ ರಾಷ್ಟ್ರಗಳು ಇಂದು ಏಡ್ಸ್‌ನ ನರಕಗಳಾಗಿವೆ.

ಸುಂದರ ಕಡಲ ದಂಡೆಗಳಲ್ಲಿ ನಿಂತು ಸಮುದ್ರದ ಮಧ್ಯದಲ್ಲಿ ಮೀನು ಹಿಡಿದು ತರುವ ಗಂಡನಿಗಾಗಿ ಕಾಯುತ್ತಾ ಅವನ ಕೆಲಸಗಳಲ್ಲಿ ಒಡನಾಡಿಯಾಗಿದ್ದ ಹೆಣ್ಣು ಇಂದು ಅದೇ ಕಡಲ ದಂಡೆಯಲ್ಲಿ ಭೋಗದ ವಸ್ತುವಾಗಬೇಕಾಗಿ ಬಂದಿದೆ. ಪ್ರವಾಸೋದ್ಯಮ ಎನ್ನುವುದು ನವ ವಸಾಹತು ಷಾಹಿಯ ಇನ್ನೊಂದು ಮುಖ. ಈ ಪ್ರವಾಸೋದ್ಯಮ ಬಡ ಜನರಿಗೆ ಎಂದೂ ವರದಾನವಾಗಿಲ್ಲ ಎಂಬುದನ್ನು ಅಧ್ಯಯನಗಳು ತೋರಿಸಿವೆ. ಸ್ಥಳೀಯ ಸಂಸ್ಕೃತಿಯನ್ನು ಮೆಟ್ಟಿಯೇ ಈ ಪ್ರವಾಸೋದ್ಯಮ ಬೆಳೆಯುತ್ತಿದೆ. ಕಡಲತಡಿಯ ಅನೇಕ ಮನೆಗಳು ಅಷ್ಟೇ ಅಲ್ಲ ಮಕ್ಕಳು ಅಕ್ಷರ ಕಲಿತು ತಮ್ಮ ಬದುಕಿನ ದಾರಿ ಕಂಡುಕೊಳ್ಳುವಂತೆ ಮಾಡಬೇಕಾಗಿದ್ದ ಶಾಲೆಗಳೂ ಸಹ ಈ ಪ್ರವಾಸೋದ್ಯಮದ ಕಾರಣದಿಂದಾಗಿ ಲೈಂಗಿಕ ಚಟುವಟಿಕೆಗಳ ತಾಣವಾಗಿವೆ. (–ಅನೀಸ್ ಜಂಗ್)

ಕಿನ್ನರಿಯರ ನಗರ ಎಂದೇ ಬಣ್ಣಿಸಲ್ಪಡುವ ಬ್ಯಾಂಕಾಕ್ ಇಂದು ಈ ಸೆಕ್ಸ್ ಟೂರಿಸಂನಿಂದಾಗಿ ನರಕದ ಗೂಡಾಗಿದೆ. ವಸಾಹತುಶಾಹಿ ನೀತಿಗಳಿಂದಾಗಿ ಬಡರಾಷ್ಟ್ರಗಳನ್ನು ವೇಶ್ಯಾವಾಟಿಕೆಗೆ ತಳ್ಳುವ ಮುಂದುವರಿದ ರಾಷ್ಟ್ರಗಳ ಮುಂದೆ ತಮ್ಮ ಪದಕೋಶದಲ್ಲಿ ಬ್ಯಾಂಕಾಕ್‌ನ ರಾಜಧಾನಿ ಥಾಂಲ್ಯಾಂಡ್‌ನ ಅಸ್ತಿತ್ವವನ್ನು ವೇಶ್ಯೆಯರು ಅತ್ಯಂತ ಹೆಚ್ಚಾಗಿರುವ ಜಾಗ ಎಂಬ ವರ್ಣನೆಗೆ ಮಾತ್ರ ಸೀಮಿತಗೊಳಿಸುತ್ತವೆ.

ಇಂತಹ ಘೋರ ಸ್ಥಿತಿಗೆ ಭಾರತ ಮುಂದಿನ ಗುರಿಯಾಗಲಿರುವುದರ ಒಳನೋಟ ಇಲ್ಲದ ರಾಜ್ಯಸಭೆಯ ಉಪಸಭಾಧ್ಯಕ್ಷ ನಜ್ಮಾ ಹೆಪ್ತುಲ್ಲಾ ಭಾರತ ಪ್ರವೇಶಿಸಲು ಸ್ಟಾರ್ ಟಿವಿಯ ರೂಪರ್ಟ್ ಮುಡೋಕ್ ಅವರಿಗೆ ಆಹ್ವಾನ ನೀಡುತ್ತಾರೆ. 'ಭಾರತದ ಮೂಲೆಮೂಲೆಯನ್ನು ಮುಟ್ಟಲು ನಮಗೆ ನಿಮ್ಮ ತಂತ್ರಜ್ಞಾನ ಬೇಕು. ನಮಗೆ ನಮ್ಮ ಸಂಸ್ಕೃತಿ ನಾಶವಾಗುತ್ತದೆ ಎಂಬ ಭಯ ಇಲ್ಲ. ನಮ್ಮ ಸಂಸ್ಕೃತಿ ಎಷ್ಟು ಆಳವಾಗಿ ಬೇರು ಬಿಟ್ಟಿದೆಯೆಂದರೆ ಅದು ಆಕಾಶದ ಅಲೆಗಳಿಂದ ಕೊಚ್ಚಿ ಹೋಗುವುದಿಲ್ಲ. ಬ್ರಿಟೀಷರು 200 ವರ್ಷ ಆಳಿದರೂ ಸಹ ನಾವು ನಮ್ಮ ಸಂಸ್ಕೃತಿಯನ್ನೇನೂ ಕಳೆದುಕೊಂಡಿಲ್ಲ' ಎನ್ನುತ್ತಾರೆ. (–ರೂಪರ್ಟ್ ಮುರ್ಡೋಕ್‌ರವರಿಗೆ ನಜ್ಮಾ ಹೆಪ್ತುಲ್ಲಾ ಅವರು, ಕೆಲವು ಪ್ರಮುಖರ ಸಮ್ಮುಖದಲ್ಲಿ ಕರೆದಿದ್ದ ಚಹಾ ಕೂಟದಲ್ಲಿ –ಅನೀಸ್ ಜಂಗ್)

ಪಾಶ್ಚಿಮಾತ್ಯ ಯೂರೋಪ್‌ನ ಟಿವಿ, ಚಲನಚಿತ್ರ ಜಾಹೀರಾತುಗಳು, ಅಲ್ಲಿನ ಹೆಲ್ತ್‌ಕ್ಲಬ್, ಪ್ರಸಾಧನ ಕೈಗಾರಿಕೆಗಳು ಮಹಿಳೆ ಚೆನ್ನಾಗಿದ್ದಾಳೆ ಎಂಬ ಮೆಚ್ಚುಗೆಯನ್ನು, ಮಹಿಳೆ ಸೆಕ್ಸಿಯಾಗಿದ್ದಾಳೆ ಎಂಬ ಮೆಚ್ಚುಗೆಯಾಗಿ ಬದಲಾಯಿಸಿದೆ. ಫ್ರಾನ್ಸ್‌ನ ಟಿವಿಗಳು ಅರೆಬೆತ್ತಲೆ ಮಹಿಳೆಯರನ್ನು ಮೇಲಿಂದ ಮೇಲೆ ತೋರಿಸುತ್ತದೆ. ಫ್ರಾನ್ಸ್‌ನಲ್ಲಿ ಮಹಿಳಾ ಪ್ರಧಾನಿಯೇ ಇಂಗ್ಲೀಷ್ ಗಂಡಸರೆಲ್ಲಾ ಸೆಕ್ಸ್‌ಲೆಸ್ ಎಂದು ಕರೆಯುವ ಮಾದರಿ ಸಿಗುತ್ತದೆ. (-ಚಿತ್ರಾ ಸುಬ್ರಮಣ್ಯಂ ಯುರೋಸ್ಕೋಪ್ ಅಂಕಣದಲ್ಲಿ)

ಮುಕ್ತ ಮಾರುಕಟ್ಟೆಯ ಸೆಕ್ಸ್ ದಾಹಕ್ಕೆ ಬೇರೊಂದು ದೇಶದ ಜೀವನ ವಿಧಾನವನ್ನು ಮಾದರಿಯಾಗಿಡುವುದರ ಮೂಲಕ, ಹಾಲಿವುಡ್ ಸಂಸ್ಕೃತಿಯನ್ನೇ ಹರಡುವುದರ ಮೂಲಕ ಸ್ಯಾಟಲೈಟ್ ಚಾನೆಲ್‌ಗಳು ರಂಗವನ್ನು ಸಜ್ಜುಪಡಿಸುತ್ತದೆ. 'ಈ ಹಿಂದೆ ಯುದ್ಧದ ಸಮಯದಲ್ಲಿ ದೇಶವನ್ನು ಉಳಿಸಲು ಮನೆಗೊಬ್ಬ ಯೋಧನನ್ನು ಕಳಿಸಿಕೊಡಿ ಎನ್ನುತ್ತಿದ್ದ ದೇಶಪ್ರೇಮದ ಕತೆ ಇನ್ನು ಮುಂದೆ ದೇಶಕ್ಕೆ ವಿದೇಶಿ ವಿನಿಮಯ ಗಳಿಸಿಕೊಟ್ಟು ದೇಶವನ್ನು ಕಾಪಾಡಲು ಮನೆಗೊಬ್ಬ ವೇಶ್ಯೆಯನ್ನು ಕಳಿಸಿಕೊಡಿ' ಎಂದು ಬದಲಾಗುವ ದಿನ ದೂರವಿಲ್ಲ ಎಂದು ಸೆಕ್ಸ್ ಟೂರಿಸಂನ ಕಟು ವಾಸ್ತವವನ್ನು ಅಶೋಕ್ ಮಿತ್ರಾ ಬಿಚ್ಚಿಡುತ್ತಾರೆ.

ಸೆಕ್ಸ್ ಎನ್ನುವುದು ಅತ್ಯಂತ ಸಹಜ ಎನ್ನುವ ಮಟ್ಟಕ್ಕೆ ಸ್ಯಾಟಲೈಟ್ ಚಾನಲ್‌ಗಳು ಕೊಂಡೊಯ್ದಿವೆ. ದೆಹಲಿಯ ಬಸ್‌ಗಳೂ ಸಹಾ 'ನಮ್ಮದು ಸೆಕ್ಸ್‌ಕೋಚ್' ಎನ್ನುವ ಘೋಷಣೆಯನ್ನೇ ಹೊತ್ತು ಸಾಗುತ್ತವೆ.

ಮಹಿಳೆಯನ್ನು ಕೀಳಾಗಿ ಚಿತ್ರಿಸುವ ಪಾಠವನ್ನು ಪ್ರಾದೇಶಿಕಾ ಭಾಷಾ ಸ್ಯಾಟಲೈಟ್ ಚಾನಲ್‌ಗಳೂ ಬೇಗನೆ ಕಲಿಯುತ್ತವೆ. ಮಹಿಳೆಯನ್ನು ಮತ್ತಷ್ಟು ಕೆಳದರ್ಜೆಗೆ ತಳ್ಳುವುದೇ ಮುಕ್ತತೆ ಎಂಬ ಮನೋಭಾವ

ಎಂಟಿವಿ ಪೀಳಿಗೆಯಲ್ಲಿ ಎದ್ದು ಕಾಣುತ್ತದೆ. ಇತ್ತೀಚೆಗೆ ಸ್ಯಾಟಲೈಟ್ ಚಾನಲ್‌ನಲ್ಲಿ ವಿದ್ಯಾರ್ಥಿನಿಯೊಬ್ಬಳಿಗೆ ಕಾರ್ಯಕ್ರಮ ನಿರೂಪಕ ಕೇಳಿದ ಪ್ರಶ್ನೆಗಳನ್ನೇ ಒಮ್ಮೆ ಗಮನಿಸಿ :

ನೀವು ಯಾರನಾದರೂ ಲವ್ ಮಾಡಿದ್ದೀರಾ ? ಅಥವಾ ಮಾಡುತ್ತಿದ್ದೀರಾ ?

ನಿಮಗೆ ಕಾಲೇಜ್‌ಗೆ ಹೋಗುವಾಗ ಬಾಯ್ ಫ್ರೆಂಡ್ ಸಿಗುತ್ತಾರೆಯೇ ? ಬಾಯ್ ಫ್ರೆಂಡ್ ನಿಮ್ಮನ್ನು ಪಿಕ್‌ಅಪ್ ಮಾಡುತ್ತಾರಾ ? ನಿಮ್ಮನ್ನು ಕರೆದರೆ ನಾಳೆ ಬರುತ್ತೀರಾ ?

(ಕೇಬಲ್ ವಾರ್ತೆಯಲ್ಲಿ ಪುನಃ ಪ್ರಕಟಿಸಿದ್ದು)

'ಸ್ಯಾಟಲೈಟ್ ಟಿವಿಯಿಂದಾಗಿ ಈಗ ಒಬ್ಬ ಜೀ ಮಹಿಳೆ ಹುಟ್ಟಿದ್ದಾಳೆ. ಮೊದಲು ದೂರದರ್ಶನದ ಮಹಿಳೆ ಎನ್ನುವವಳೇ ಇರಲಿಲ್ಲ' ಎಂಬ ವ್ಯಾಖ್ಯಾನ ಸ್ಯಾಟಲೈಟ್ ಟಿವಿಗಳು ಭಾರತ ಪ್ರವೇಶಿಸಿದ ನಂತರ ಆರಂಭವಾಗಿದೆ.

(ನಮಿತಾ ಗೋಖಲೆ, 'ಫೀಸಸ್'ನಲ್ಲಿ)

ದೂರದರ್ಶನದ ಮಹಿಳೆ ಎನ್ನುವ ಮಾತು ಜಾಹಿರಾತಿನ ಲಲಿತಾಜಿ ಇಲ್ಲವೇ ವಾರ್ತೆ ಓದುವಾಕೆ ಇಲ್ಲವೇ ಮಹಿಳಾಮಂತ್ರಿ ಎಂಬಷ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಸ್ಯಾಟಲೈಟ್ ಟಿವಿ ಚಾನಲ್‌ಗಳಿಂದಾಗಿ ಅದರಲ್ಲೂ ಜೀ ಟೀವಿ ಚಾನಲ್ ಮಹಿಳೆಯರ ಆಲೋಚನೆಯ ದಿಕ್ಕನ್ನೇ ವಿಸ್ತರಿಸಿದೆ. ವೈವಿಧ್ಯತೆ ಇಲ್ಲದ ಏಕರೂಪದ 'ಮಹಿಳೆ'ಯನ್ನು ರೂಪಿಸುತ್ತಿದೆ ಎನ್ನಲಾಗುತ್ತಿದೆ.

ಈ ಮಾತುಗಳಿನ್ನು ಹೇಳುವಾಗಲೇ ಸ್ಯಾಟಲೈಟ್ ಟಿವಿ ಚಾನಲ್‌ಗಳು ಭಾರತದ ಮಹಿಳೆಯರ ಮಧ್ಯೆ ಹರಡುತ್ತಿರುವ ಕೊಳ್ಳುಬಾಕ ಸಂಸ್ಕೃತಿಯನ್ನು ಮತ್ತು ಪಡೆಯುತ್ತಿರುವ ಪರಕೀಯ ಜೀವನ ವಿಧಾನವನ್ನು ಮರೆಯಲು ಇಚ್ಛಿಸುತ್ತದೆ. 'ನಮ್ಮ ತಂದೆ ತಾಯಿಯರ ಪೀಳಿಗೆಯನ್ನು ಎಷ್ಟು ಉಳಿಸುತ್ತಾರೆ ಎಂಬುದರ ಮೇಲೆ ಅಳೆಯಲಾಗುತ್ತಿತ್ತು. ಆದರೆ ಇಂದು ಎಷ್ಟು ಖರ್ಚು ಮಾಡುತ್ತಿದ್ದೇವೆ' ಎನ್ನುವುದರ ಮೇಲೆ ನಮ್ಮ ಸ್ಥಾನಮಾನಗಳು ನಿಂತಿವೆ. (–ಮೀನಾಕ್ಷಿ ಮಾಥ್ವಾನಿ, ಜೀ ಟಿವಿಯ ಜಾಹಿರಾತು ಸಮಯ ಮಾರುವ ಸಂಸ್ಥೆಯ ಉಪಾಧ್ಯಕ್ಷೆ)

ಜಾಹಿರಾತು ತಯಾರಿಕಾ ಸಂಸ್ಥೆಗಳು ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡೇ ತಮ್ಮ ಬಹುತೇಕ ಜಾಹಿರಾತುಗಳನ್ನು ಸಿದ್ಧಪಡಿಸುತ್ತವೆ. ಸದಾ ಮೇಲ್ವರ್ಗದ ಬದುಕಿನ ರೀತಿಯನ್ನೇ ಆದರ್ಶವಾಗಿಟ್ಟುಕೊಂಡ ಮಧ್ಯಮ ವರ್ಗವು ಮುಕ್ತ ಮಾರುಕಟ್ಟೆ ಮನೆ ಬಾಗಿಲಿಗೆ ತಂದು ಸುರಿಯುವ ಧಾರಾಳ ಆಯ್ಕೆಗೆ, (ಈ ಆಯ್ಕೆಯನ್ನು ನಾನಾ ರೀತಿಯಲ್ಲಿ ಮೇಲ್ವರ್ಗದ ಸಂಕೇತವೆಂಬಂತೆ ಜಾಹೀರು ಮಾಡಲು ಸ್ಯಾಟಲೈಟ್ ಚಾನಲ್‌ಗಳನ್ನೂ ನೀಡಿರುವುದರಿಂದ ಮಧ್ಯಮ ವರ್ಗ) ಹಾಗೂ ಈ ಕೊಳ್ಳುಬಾಕ ಸಂಸ್ಕೃತಿಯ ಹೊಡೆತಕ್ಕೆ ಸುಲಭವಾಗಿ ತುತ್ತಾಗುತ್ತದೆ.

ಸದಾ ಜೀ ಮತ್ತು ಹತ್ತಾರು ಸ್ಯಾಟಲೈಟ್ ಟಿವಿಗಳನ್ನು ನೋಡುವ ಮಹಿಳೆಯ ಮನಕ್ಕೆ ಸಂತ ಬಾರ್ಬರಾ, ಬೋಲ್ಡ್ ಅಂಡ್ ಬ್ಯೂಟಿಫುಲ್‌ನ ನಾಯಕಿಯರು ಹೆಜ್ಜೆ ಹಾಕುತ್ತಾರೆ ಮಾತ್ರವಲ್ಲ ತಾವು ಬದುಕುವ ರೀತಿಯನ್ನು ಮಾದರಿಯಾಗಿ ನೀಡುತ್ತಾರೆ. ಸ್ಯಾಟಲೈಟ್ ಚಾನಲ್‌ಗಳಲ್ಲಿ ಪ್ರಸಾರವಾಗುವ ಸೀರಿಯಲ್‌ಗಳ ನಾಯಕಿಯರ ಬೇಕು ಬೇಡಗಳೇ ಈ ಚಾನಲ್ ವೀಕ್ಷಿಸುವ ಮಹಿಳೆಯರ ಬೇಕು ಬೇಡಗಳು ಆಗುತ್ತವೆ.

ಜಾಹಿರಾತುಗಳು ಕೇವಲ ಬೇಕುಗಳನ್ನು ಮಾತ್ರ ಸೃಷ್ಟಿಸುವ ಕೆಲಸ ಮಾಡದೆ ಮಧ್ಯಮವರ್ಗದ ಆಲೋಚನಾ ವಿಧಾನವನ್ನೇ ಪ್ರಶ್ನಿಸುವ ಕೆಲಸ ಮಾಡುತ್ತದೆ. ಮಹಿಳಾ ವಿಮೋಚನಾ ಹೋರಾಟ, ಬದಲಾವಣೆಗಾಗಿ ನಡೆಯುವ ಪ್ರಯತ್ನಗಳೆಲ್ಲವೂ ಜಾಹೀರಾತುಗಳ ಕೈನಲ್ಲಿ ಗೇಲಿಗೊಳಪಡುತ್ತವೆ. ಈ ಕಾರಣಕ್ಕಾಗಿಯೇ ವಿ ವಾಂಟ್ ರೆವಲ್ಯೂಷನ್ ಎನ್ನುವ ಮಹಿಳೆಯರ ಹೋರಾಟ ಮಿಕ್ಸಿಗಾಗಿ ನಡೆಯುವ ಹೋರಾಟವಾಗಿ ಬಿಡುತ್ತದೆ. ಮಹಿಳೆಯ ಮನಸ್ಸಿನಲ್ಲಿ ಬೇರೂರಿರುವ ಎಷ್ಟು ಉಳಿಸಿದೆ ಸಂಸ್ಕೃತಿಯನ್ನು ಕಿತ್ತೊಗೆದು ಆಕೆಯ ಆದರ್ಶದ ರೀತಿಗಳನ್ನು ಬದಲಿಸಿದರೆ ಮಾತ್ರ ದೂರದ ಬಹುರಾಷ್ಟ್ರೀಯ ಕಂಪನಿಗಳ ವಸ್ತುಗಳಿಗೆ ಮಾರುಕಟ್ಟೆ ಸಿಗಲು ಸಾಧ್ಯ. ಮಾತ್ರವಲ್ಲ ಬೇಕೆಂದಾಗ ಬೇಕಾದ್ದನ್ನು ಹೇಳಿದರೂ ಕೇಳುವ ಒಂದು ವರ್ಗವನ್ನು ಈ ಜಾಹಿರಾತುಗಳು ಸೃಷ್ಟಿಸುತ್ತವೆ.

'ಹಣವನ್ನು ಖರ್ಚು ಮಾಡಲು ಎಲ್ಲಾ ರೀತಿಯ

ಪ್ರೋತ್ಸಾಹ ಸಿಗುತ್ತಿದೆ. ಇದರಿಂದಾಗಿ ಜನರು ತಮ್ಮ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಸ್ತುಗಳ ಗ್ರಾಹಕರಾಗುತ್ತಿದ್ದಾರೆ, ಆಹಾರ, ಬಟ್ಟೆ, ವಸತಿಯಂತಹ ಮನುಷ್ಯರ ಮೂಲಭೂತ ಅವಶ್ಯಕತೆಗಳು ಈಗ ಅಧಿಕ ಹಣ ವಿನಿಯೋಗದ ಜನಪ್ರಿಯ ಕ್ಷೇತ್ರಗಳು. ಹೋಟೆಲ್‌ಗಳು, ಬಾರು ರೆಸ್ಟೋರೆಂಟ್‌ಗಳು, ಮದ್ಯದಂಗಡಿಗಳು, ಬ್ಯೂಟಿ ಪಾರ್ಲರ್‌ಗಳು. ಇಂತಹ ಅನೇಕ ಸ್ಥಳಗಳು ಅನೇಕ ಸದಾ ಗ್ರಾಹಕರಿಂದ ತುಂಬಿರುತ್ತವೆ. ಅದೇ ರೀತಿ ಔಷಧದ ಅಂಗಡಿಗಳು, ಆಸ್ಪತ್ರೆ ಕೂಡಾ ಯಾವಾಗಲೂ ತುಂಬಿ ತುಳುಕುತ್ತಿರುತ್ತವೆ. ಹಸಿವು ಇಲ್ಲದಿದ್ದರೂ ತಿನ್ನುವ, ಬಾಯಾರಿಕೆ ಆಗದಿದ್ದರೂ ಕುಡಿಯುವ' ಪ್ರವೃತ್ತಿ ಹೆಚ್ಚಾಗಲು ಹಣವನ್ನು ಖರ್ಚು ಮಾಡುವ ಧೋರಣೆಗೆ ಪರೋಕ್ಷವಾಗಿ ಸಿಕ್ಕಿರುವ ಬೆಂಬಲವೇ ಕಾರಣ, ಇದು ಆರ್ಥಿಕ ಉದಾರೀಕರಣದಿಂದ ಬಂದದ್ದು. ನಾಲ್ಕು ಬಟ್ಟೆಗಳು ಸಾಕಾಗುವ ಸ್ಥಿತಿಯಲ್ಲಿ 40 ಬಟ್ಟೆಗಳನ್ನು ಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಚಿಕ್ಕ ಕುಟುಂಬವೊಂದು ಇದ್ದರೂ ಅರಮನೆಯಂತಹ ವೈಭವೋಪೇತ ಸೌಧಗಳನ್ನು ನಿರ್ಮಿಸುವುದು ಆಧುನಿಕ ಸಮಾಜದ ಪ್ರವೃತ್ತಿ ಎಂದು ಭಾವಿಸಲಾಗುತ್ತಿದೆ.'

'ಹಣದುಬ್ಬರವನ್ನು ಅರ್ಥಶಾಸ್ತ್ರಜ್ಞರು ದೇಶದ ಅರ್ಥವ್ಯವಸ್ಥೆಯ ಪ್ರಗತಿಯ ಲಕ್ಷಣ ಎಂದು ಎಷ್ಟೇ ಹೇಳಿದರೂ, ನಿಜ ಬದುಕಿನಲ್ಲಿ ದಿನದ ಬಳಕೆಗೆ ಬೇಕಾದ ವಸ್ತುಗಳನ್ನು ಮಿತ ಆದಾಯದಲ್ಲಿ ಕೊಂಡುಕೊಳ್ಳಲಾರದೆ ಜನರು ದಿನ ದಿನವೂ ಸಂಕಟಪಡುತ್ತಿದ್ದಾರೆ. ಇವರ ಪಾಲಿಗೆ ವಸ್ತುಗಳ ಬೆಲೆ ಏರಿಕೆ ಒಂದು ಆಘಾತವಾದರೆ, ಅನೇಕರು ಸ್ವಚ್ಛಂದವಾಗಿ ಮಿತಿಮೀರಿ ಇಂತಹ ವಸ್ತುಗಳನ್ನು ಕೊಳ್ಳುತ್ತಿರುವ ಪರಿಸರದಲ್ಲಿ ತಾವು ಬದುಕಬೇಕಾಗಿರುವುದು ಇನ್ನೊಂದು ಆಘಾತ. ಇಂತಹ ಕುಟುಂಬದ ಮಕ್ಕಳಿಗೆ ಅವಮಾನದ, ಹೆಂಗಸರಿಗೆ ಮೂಕ ಅತೃಪ್ತಿಯ, ಗಂಡಸರಿಗೆ ಅಸಹನೆಯ ಭಾವನೆ ಮೂಡುತ್ತದೆ. ಇಂತಹ ಪರಿಸರ ಹೀಗೇ ಮುಂದುವರಿದರೆ ನಮ್ಮ ದೇಶ ತೈಮೋನ್‌ನ ದುರಂತದ ಬಳಕದ 'ಅಥೆನ್ಸ್' ಆಗಬಹುದೇ ಎನ್ನುವ ಭಯ ನಮ್ಮನ್ನು ಕಾಡುತ್ತದೆ'. (ಪ್ರೊ. ಬಿ.ಎ. ವಿವೇಕ ರೈ, ತಮ್ಮ ಅಂಕಣದಲ್ಲಿ)

ಜೀ ಟಿವಿ ಬಾಲಿವುಡ್ ಮಾದರಿಯ ಧಾರಾವಾಹಿಗಳನ್ನೇ ತಯಾರುಮಾಡಿ ತನ್ನ ವೀಕ್ಷಕ ಮಹಿಳೆಯರಿಗೆ ಉಣಬಡಿಸುತ್ತದೆ. ಈ ಕಾರಣಕ್ಕಾಗಿಯೇ ಜೀ ಟಿವಿಯ ಪಾತ್ರಗಳು ಇಂದು 'ಬಾ ಸ್ಟ ಡ್ ರ್' ಎನ್ನಬಲ್ಲವು. ಕ್ಯಾಂಪಸ್ ಧಾರಾವಾಹಿಗಳ ಹದಿಹರೆಯದ ಹುಡಿಗಿಯರ ಮುಖ್ಯ ಸಮಸ್ಯೆ ತಮ್ಮ ಗೆಳೆಯರೊಂದಿಗೆ ಪಿಕ್ನಿಕ್‌ಗೆ ಹೋಗಬಹುದೋ ಇಲ್ಲವೋ ಎಂಬುದಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಜೀ ಟಿವಿ ಈಗ ಸ್ಟಾರ್ ಟಿವಿಯೊಂದಿಗೆ ಜಂಟಿಯಾಗಿ ಚಲನಚಿತ್ರಗಳನ್ನು 24 ಗಂಟೆಯೂ ಪ್ರಸಾರ ಮಾಡುವ ಯೋಜನೆಗೆ ಸಹಿಹಾಕಿದೆ. ಸ್ಟಾರ್ ಟಿವಿ ಹಾಲಿವುಡ್ ಚಲನಚಿತ್ರಗಳನ್ನು ನೀಡಿದರೆ ಜೀ ಟಿವಿ ಬಾಲಿವುಡ್ ಚಿತ್ರಗಳನ್ನು ನೀಡುತ್ತದೆ. ಹೀಗಾಗಿ ಹಾಲಿವುಡ್ ಮತ್ತು ಬಾಲಿವುಡ್ ಅಥವಾ ಸ್ಯಾಟಲೈಟ್ ಚಾನಲ್‌ಗಳ ಭಾಷೆಯಲ್ಲಿಯೇ ಹರ್ತಿಸುವುದಾದರೆ ಈ ಹ್ಯಾಂಬರ್ಗರ್ ಮತ್ತು ಮಸಾಲೆದೋಸೆಯ ಹೊಸ ತಳಿ ಮಹಿಳೆಯರ ಆಲೋಚನೆಗಳ ಮೇಲೆ ಬಿರುಗಾಳಿಯಂತೆ ಬೀಸಲಿದೆ.

ಮಹಿಳೆಯರ ಸಮಸ್ಯೆಗಳನ್ನು ದೃಶ್ಯಮಾಧ್ಯಮದ ಮೂಲಕ ಸಮರ್ಥವಾಗಿ ಬಿಂಬಿಸುತ್ತಿರುವ ಅನೇಕ ಮಹಿಳೆಯರಿದ್ದಾರೆ. ಸಾಮಾಜಿಕ ಸಮಸ್ಯೆಗಳನ್ನು ಮಂಡಿಸಲು ಇರುವ ಮುಖ್ಯ ಸಾಧನವಾದ ಡಾಕ್ಯುಮೆಂಟರಿ ಚಿತ್ರಗಳನ್ನು ನಿರ್ದೇಶಿಸುತ್ತಿರುವವರಲ್ಲಿ ಮಹಿಳೆಯರ ಪಾಲು ಗಮನಾರ್ಹವಾದದ್ದು. 'ಮಹಿಳೆಯರಿಗೆ ಡಾಕ್ಯುಮೆಂಟರಿ ಚಿತ್ರ ತಯಾರಿಸುವುದು ಕೇವಲ ಖುಷಿಯ ವಿಚಾರವಲ್ಲ. ಸಾಮಾಜಿಕ ಸಮಸ್ಯೆಗಳನ್ನು ಜನರಿಗೆ ಎತ್ತಿ ತೋರಿಸಲು ಇರುವ ಸಾಧನ' ಎಂದು ಅಂತರಾಷ್ಟ್ರೀಯ ಡಾಕ್ಯುಮೆಂಟರಿ ಚಿತ್ರೋತ್ಸವ ಶ್ಲಾಘಿಸಿದ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಇಡೀ ದೇಶದ ಮುಂದಿಡುವುದರ ಮೂಲಕ ಸಮಾಜ ಬದಲಾವಣೆಗೆ ಅರ್ಥಪೂರ್ಣ ಕೊಡುಗೆಗಳನ್ನು ಮಹಿಳಾ ನಿರ್ದೇಶಕಿಯರು ನೀಡುತ್ತಿರುವಾಗಲೇ ಮಹಿಳೆಯರನ್ನೇ ಗುರಿಯಾಗಿಟ್ಟುಕೊಂಡ ಸ್ಯಾಟಲೈಟ್ ಟಿವಿ ಚಾನೆಲ್‌ಗಳಿಗೆ ಇವು ಸಮರ್ಥವಾದ ಆಯ್ಕೆ ಎಂದು ಅನಿಸುವುದೇ ಇಲ್ಲ. ಹಾಲಿವುಡ್–ಬಾಲಿವುಡ್ ಕನಸುಗಳನ್ನು ಹಂಚುವುದರಲ್ಲಿಯೇ ಮುಳುಗಿರುವ ಈ ಚಾನಲ್‌ಗಳು ಒಂದು ಪರಕೀಯ ಜೀವನ ವಿಧಾನದ ಆಯ್ಕೆಯನ್ನು ಒತ್ತಾಯವಾಗಿ ಹೇರುತ್ತಿವೆ.

'ಹೆಣ್ಣೊಬ್ಬಳು ಕಲಿತರೆ ಶಾಲೆಯೊಂದು ತೆರೆದಂತೆ' ಎನ್ನುವ ಮಾತು ವಿದ್ಯೆ ಕಲಿತ ಹೆಣ್ಣು ಹೇಗೆ ತನ್ನ

ಕುಟುಂಬವನ್ನೇ ಈ ವಿದ್ಯೆಯುತ್ತ ಪ್ರಭಾಲಿಸಬಲ್ಲಳು ಎನ್ನುವುದನ್ನು ಸೂಚಿಸುತ್ತದೆ. ತನ್ನ ಮಕ್ಕಳನ್ನು, ತನ್ನ ಗಂಡನನ್ನೂ ಶಿಕ್ಷಣದ ಚೌಕಟ್ಟಿಗೆ ಕರೆತರುವ ಈ ಮಹಿಳೆ ಒಬ್ಬ ಜೇ ಮಹಿಳೆಯಾದರೆ ?

ಸ್ಯಾಟಲೈಟ್ ಚಾನಲ್‌ಗಳ ಜೀವನ ವಿಧಾನದಿಂದ ರೂಪುಗೊಳ್ಳುವ ಈಕೆ ಜೇ ಮಕ್ಕಳನ್ನೂ ಜೇ ಗಂಡನನ್ನೂ ಕೊನೆಗೆ ಜೇ ಕುಟುಂಬವನ್ನೂ ಸೃಷ್ಟಿಸಬಲ್ಲಳು. ಸ್ಯಾಟಲೈಟ್ ಟಿವಿ ಚಾನೆಲ್‌ಗಳಿಗೆ ಈ ಸತ್ಯಗಳು ಗೊತ್ತಿರುವುದರಿಂದಲೇ ಮಹಿಳೆ ಈ ಚಾನಲ್‌ಗಳ ಕೇಂದ್ರಬಿಂದುವಾಗಿದ್ದಾಳೆ.

'ಡಂಕಲ್ ಪ್ರಸ್ತಾವನೆಯ ಬೆಳಕಿನಲ್ಲಿ ಸ್ಯಾಟ್‌ಲೈಟ್ ಟಿವಿ' ಪುಸ್ತಕದ ಆಯ್ದಭಾಗ

ಪ್ರಕಾಶಕರು : ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು–560 001.

ಬೆಲೆ : ರೂ. 20-00

ಪಂಚರಂಗಿ ಗಿಳಿ

ಪ್ರೀತಿಯ ಮಗಳು ಸುಶೀಲಾ
ಎಪ್ಪತ್ತು ಪ್ರತಿಶತ ಮಾಡಿ
ಹತ್ತನೆ ಇಯತ್ತೆ ಪಾಸಾಗಿ
ಮನೆಯಲ್ಲಿಂದು ಸಂತಸದ ಮಹಾಪೂರ
ಅಂಗಳದ ಗುಲ್‌ಮೊಹರ್‌ಗೆ ಕೆಂಪುಕೆಂಪಿನ ಹಬ್ಬ.

ಸುಶೀಗೆ ಖುಷಿಯೋ ಖುಷಿ
ನಾ ಆರ್ಟ್ಸ್ ತಗೋತೀನಿ,
ನಾ ಇತಿಹಾಸ ಓದ್ತೀನಿ
ಅಪ್ಪಾ ನಾ ಯಾವ ಕಾಲೇಜಿಗೆ ಹೋಗಲಿ ?
ಸುಶೀ ಇಂದು ಬಣ್ಣಗಳ ಕಾರಂಜಿ
ಬಾನೆತ್ತರಕೆ ಹಾರಲು ಕಾದಿರುವ ಪಂಚರಂಗಿ ಗಿಳಿ

ಅಪ್ಪನ ನಾಲಿಗೆಗೆ
ಅಡ್ಡ ಬಿದ್ದಿದೆ ಬಡತನದ ಹನುಮ ಬಾಲ
ಎದೆಕಣಿವೆಯೊಳಗೆ ಮೌನದ ಸಾಮ್ರಾಜ್ಯ
ಆಸೆಯ ಈ ಕಂಗಳು ಹುಡುಕುತವೆ
ಆ ಕಣ್ಣುಗಳಲಿ ಆಶ್ವಾಸನೆಯ ಬೆಳಕು
ಕಂಡಿದ್ದು ಬರೀ ಕರಕಾದ ಕರಿಬತ್ತಿ.

ಅಪ್ಪಾ ನೀ ಹೆಂಗರ ಮಾಡು
ನನಗ ಕಾಲೇಜಿಗೆ ಕಳಿಸು
ಯಾವ್ಯಾವದೋ ನೂರು ಅಡಚಣೆ
ಹೊಲಿದು ಬಿಟ್ಟಿವೆ ಗಟ್ಟಿಯಾಗಿ
ಅಪ್ಪನ ತುಟಿಗಳನ್ನು
ಎದೆಬೆಟ್ಟದಿಂದ ಬರಲಿಲ್ಲ ಮಾರ್ದನಿ.

ರಾತ್ರಿ ಊಟದ ನಂತರ
ಮೊರೆಯುವ ಧೈರ್ಯದ ಸಾಗರ
ತುಂಬಿಕೊಂಡು ಎದೆಯೊಳಗೆ
ಒಂದೊಂದೆ ಅಕ್ಷರ ಪೋಣಿಸುತ
ಖಾಲಿ ತಟ್ಟೆಯಲಿ ಅನ್ನದ ಅಗುಳು
ದಿಟ್ಟಿಸುತ ಕೇಳುವಳು ಸುಶೀ
ಅಪ್ಪಾ ನಿನ್ನ ತಾಳಿ ಮಾರಿದರ ?

ಆ ಗಳಿಗೆ ಆ ಒಂದು ಗಳಿಗೆ
ಇರುಳಿಗೆ ತಲೆ ಸುತ್ತಿ ಬಂದು
ಮೌನಕ್ಕೆ ಮೂರ್ಛೆ ಬಂದು
ಸುತ್ತಲಿನ ಗಾಳಿಗೆ ಉಸಿರು ಕಟ್ಟಿ
ತಾಳಿ ಆನಂದದಿಂದ ಉಬ್ಬಿ

....

ಹೇಳಿ
ಇಳಿಸುವಿರಾ ನೀವು ತಾಳಿ ?
ಹಾರಿಸುವಿರಾ ಪಂಚರಂಗಿ ಗಿಳಿ ?

–ಸುಕುಲಜೀವ

ಲೇಖಕಿಯರ ಸೃಜನೇತರ ಸಾಹಿತ್ಯ

ಸೃಜನೇತರ ಸಾಹಿತ್ಯವೆಂದರೆ ಏನು ? ಅನುವಾದ, ವಿಮರ್ಶೆ, ಸಂಪಾದನೆ–ಮುಂತಾದ ಬರವಣಿಗೆಗಳಿಗೆ ಸೃಜನಶೀಲತೆ ಬೇಡವೆ ? ಸೃಜನೇತರ ಬರವಣಿಗೆಯೆಂದೊಡನೆ, ಅದು ಎರಡನೆಯ ದರ್ಜೆಯ ಬರವಣಿಗೆಯಾದೀತೆ ? – ಇವೇ ಮುಂತಾದ ಪ್ರಶ್ನೆಗಳು ಪುತ್ತೂರಿನ ವಿಚಾರ ಸಂಕಿರಣವೊಂದರಲ್ಲಿ ಚರ್ಚೆಗೊಳಗಾದವು. ಪುತ್ತೂರು ಕರ್ನಾಟಕ ಸಂಘದವರು, ಕರಾವಳಿ ಲೇಖಕ

ಪುತ್ತೂರು ಕರ್ನಾಟಕ ಸಂಘದವರು, ಕರಾವಳಿ ಲೇಖಕ–ವಾಚಕಿಯರ ಸಂಘ, ಸೈಂಟ್ ಫಿಲೋಮಿನಾ ಕಾಲೇಜು ಕನ್ನಡ ಸಂಘ ಮತ್ತು ವಿವೇಕಾನಂದ ಕಾಲೇಜು ಕನ್ನಡ ಸಂಘಗಳ ಜೊತೆಗೂಡಿ ಏಪ್ರಿಲ್ ತಿಂಗಳಲ್ಲಿ 'ಕನ್ನಡದಲ್ಲಿ ಸೃಜನೇತರ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ' ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.

ಲೇಖಕಿಯರ ಸಂಘ, ಸೈಂಟ್ ಫಿಲೋಮಿನಾ ಕಾಲೇಜು ಕನ್ನಡ ಸಂಘ ಮತ್ತು ವಿವೇಕಾನಂದ ಕಾಲೇಜು ಕನ್ನಡ ಸಂಘಗಳ ಜೊತೆಗೂಡಿ ಏಪ್ರಿಲ್ ತಿಂಗಳಲ್ಲಿ 'ಕನ್ನಡದಲ್ಲಿ ಸೃಜನೇತರ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ' ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.

ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಹೇಮಲತಾ ಮಹಿಷಿಯವರು ಮಹಿಳೆಯಾದವಳು ಅನೇಕ ಬಗೆಯ ಒತ್ತಡ ಮತ್ತು ವಿರೋಧಗಳ ನಡುವೆ ಸಾಹಿತ್ಯ ಸೃಷ್ಟಿ ಮಾಡಬೇಕಾಗುತ್ತದೆ. ಪ್ರಕೃತ ಕೆಲವು ಲೇಖಕಿಯರಿಗಾದರೂ ಅರಿಯುವ, ಬರೆಯುವ ಸ್ವಾತಂತ್ರ್ಯ, ಅವಕಾಶಗಳು ಸಿಗುತ್ತಾ ಇವೆ. ಆದರೆ ಈ ಮಹಿಳಾ ಸಾಹಿತ್ಯವನ್ನು ಒಟ್ಟಾರೆಯಾಗಿ ಗುರುತಿಸುವ, ದಾಖಲಿಸುವ ಕೆಲಸ ಆಗುತ್ತಿಲ್ಲ, ಎಂದು ಅಭಿಪ್ರಾಯ ಪಟ್ಟರು.

ಕನ್ನಡ ಲೇಖಕಿಯರ ಅನುವಾದ ಸಾಹಿತ್ಯವನ್ನು ಕುರಿತು ಮಾತನಾಡಿದ ಎನ್. ಗಾಯತ್ರಿಯವರು, ವಿಶೇಷವಾಗಿ ಶ್ರೀಮತಿ ಸರಸ್ವತಿ ರಿಸಬುಡ್‌ರವರ ಕೊಡುಗೆಯನ್ನು ಸ್ಮರಿಸುತ್ತಾ, ಪತ್ರಿಕಾ ವ್ಯವಸಾಯದ ಮೂಲಕ ಅನುವಾದ ಸಾಹಿತ್ಯದಲ್ಲಿ ತೊಡಗಿಕೊಂಡವರ ಸಾಧನೆಯನ್ನು ಗುರುತಿಸಿದರು. ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಶ್ರೀಮತಿ ಟಿ. ಎನ್. ನಾಗರತ್ನ ಮತ್ತು ವೈ. ಸಿ. ಭಾನುಮತಿಯವರ ಕೊಡುಗೆಯೊಂದಿಗೆ ವಿವಿಧ ರೀತಿಯ ಗ್ರಂಥ ಸಂಪಾದನಾ ಕಾರ್ಯಗಳಲ್ಲಿ ತೊಡಗಿಕೊಂಡವರನ್ನು ದಾಖಲಿಸಿದರು.

ಕನ್ನಡದಲ್ಲಿ ವಿಜ್ಞಾನ ಮತ್ತು ವೈದ್ಯಕೀಯ ಸಾಹಿತ್ಯವನ್ನು ಕುರಿತು ಮಾತನಾಡಿದ ಶ್ರೀಮತಿ ನೇಮಿಚಂದ್ರ ಅವರು ಕನ್ನಡದಲ್ಲಿ ವಿಜ್ಞಾನದ ವಿಷಯಗಳನ್ನು ಕುರಿತು ಬರೆದ ಮಹಿಳೆಯರಲ್ಲಿ ಮೊದಲಿಗರಾದ ಕೆ.ವಿ. ರತ್ನಮ್ಮ, ಎಚ್.ಎಸ್. ಕಾತ್ಯಾಯಿನಿ, ಬಿ. ಎಸ್. ರುಕ್ಕಮ್ಮ, ಬಿ. ಎಸ್. ಮಯೂರ ಅವರ ಕೊಡುಗೆಯನ್ನು ನೆನೆದರು. ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿಯೇ ವೈದ್ಯ ವಿಷಯಗಳ ಬಗ್ಗೆ ಬರೆದ ಡಾ॥ ಅನುಪಮಾ ಅವರ ಕೃತಿಗಳನ್ನು, ಎಂಭತ್ತರ ದಶಕದಲ್ಲಿ ಬರೆದ ಡಾ॥ ಸಿ. ಅನ್ನಪೂರ್ಣಮ್ಮ, ಡಾ॥ ಶಮಂತಕಮಣಿ ನರೇಂದ್ರನ್ ಅವರ ಕೃತಿಗಳನ್ನು ಹಾಗೂ ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ಸಾಹಿತ್ಯ ರಚನೆಗೆ ತೊಡಗಿದ ಡಾ॥ ಗಿರಿಜಮ್ಮ ಮತ್ತು ಡಾ॥ ಲೀಲಾವತಿ ದೇವದಾಸ್ ಅವರ ಕೃತಿಗಳನ್ನು ಕುರಿತು ಚರ್ಚಿಸಿದರು. ಲೇಖಕಿಯರ ವೈದ್ಯಕೀಯ ಪುಸ್ತಕಗಳೆಲ್ಲ ಹೆರಿಗೆ, ಪ್ರಸವ, ಹುಟ್ಟು, ಮುಟ್ಟುಗಳಿಗೇ ಹೆಚ್ಚು ಸೀಮಿತವಾಗಿವೆ ಎನ್ನುತ್ತಾ ಇದಕ್ಕೆ ಹೊರತಾದ ವಿಷಯಗಳನ್ನು ಆರಿಸಿಕೊಂಡು ಬರೆದ ಅನುಪಮಾರವರ 'ಕ್ಯಾನ್ಸರ್ ಜಗತ್ತು' 'ಒತ್ತಡದ ಬೇನೆಗಳು' ಪುಸ್ತಕಗಳನ್ನು ನೆನಸಿದರು.

ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆಯೇನೋ ಇಲ್ಲ, ಎನ್ನುವ ಮಾತಿಗೆ ಉತ್ತರವಾಗಿ ವಿವಿಧ ಚಾರಿತ್ರಿಕ ಘಟ್ಟದಲ್ಲಿ ಮಹಿಳೆಯರ ವಿಮರ್ಶಾ ಸಾಹಿತ್ಯವನ್ನು ಗುರುತಿಸಿದ ಡಾ॥ ಬಿ. ಎನ್. ಸುಮಿತ್ರಾ

ಾಯಿಯವರು, ಈ ದಿಕ್ಕಿನಲ್ಲಿ ನಡೆದ ಸಂಘಟಿತ ಪ್ರಯತ್ನಗಳನ್ನು ದಾಖಲಿಸಿದರು.

ಜಾನಪದ ಕ್ಷೇತ್ರ ಕಾರ್ಯ ಮತ್ತು ಸಂಗ್ರಹ ಕುರಿತು ಮಾತನಾಡಿದ ಡಾ॥ ಶಾಲಿನಿ ರಘುನಾಥ್‌ರವರು ಜಾನಪದ ಕ್ಷೇತ್ರ ಕಾರ್ಯದಲ್ಲಿ ಗಂಭೀರವಾಗಿ ತಮ್ಮನ್ನು ತೊಡಗಿಸಿಕೊಂಡು ದುಡಿಯುತ್ತಿರುವ ಸುಶೀಲಾ ಉಪಾಧ್ಯಾಯ ಮತ್ತು ಗಾಯಿತ್ರಿ ನಾವಡಾ ಅವರ ಕೆಲಸಗಳನ್ನು ಸಮೀಕ್ಷಿಸಿದರು. ಜಾನಪದ ಸಾಹಿತ್ಯದಲ್ಲಿ ಕಂಡು ಬರುವ ಸ್ತ್ರೀವಾದಿ ಅಂಶಗಳನ್ನು ಕುರಿತು ವ್ಯಾಪಕ ಚರ್ಚೆ ನಡೆಯಿತು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಡಾ॥ ಸುಜಾತಾ, 'ಪುತ್ತೂರಿನ ಕನ್ನಡ ಸಂಘಗಳು ವ್ಯವಸ್ಥೆಗೊಳಿಸಿರುವ ಈ ವಿಚಾರಗೋಷ್ಠಿ ಸೃಜನೇತರ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಯನ್ನು ಕುರಿತಂತೆ ಇನ್ನಷ್ಟು ವ್ಯಾಪಕ ಚರ್ಚೆಗೆ ನಾಂದಿಯಾಗುತ್ತದೆ' ಎಂದರು.

'ಸೃಜನೇತರ' ಎಂಬ ಪದದ ಪ್ರಯೋಗದ ಔಚಿತ್ಯ ಕುರಿತು ಚರ್ಚಿಸಿದ ಡಾ॥ ಸುಜಾತ ಅವರು, ಈ ವಿಷಯದಲ್ಲಿ ಹಲವಾರು ಭಿನ್ನಾಭಿಪ್ರಾಯಗಳು ಇರುವುದನ್ನು ಗುರುತಿಸುತ್ತಾ, ಚಿಂತನಶೀಲ, ವಿದ್ವತ್ ಸಾಹಿತ್ಯ ಮುಂತಾದ ಪದಗಳ ಬಳಕೆಯತ್ತ ಗಮನ ಸೆಳೆದರು. ಎಲ್ಲ ಸಾಹಿತ್ಯ ಪ್ರಕಾರಗಳಿಗೆ ಒಂದು ಹಂತದವರೆಗೆ ಸೃಜನಶೀಲತೆ ಅಗತ್ಯವೆಂಬುದನ್ನು ಹೇಳುತ್ತಾ, ಅಧ್ಯಯನದ ದೃಷ್ಟಿಯಿಂದ ಈ ರೀತಿ ಗಡಿ ಗುರುತಿಸುವ ಪದ ಪ್ರಯೋಗ ಅನಿವಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಪುತ್ತೂರು ಕರ್ನಾಟಕ ಸಂಘದ ಅಧ್ಯಕ್ಷ ಬೋಳಂತಕೋಡಿ ಈಶ್ವರ ಭಟ್ಟರು ಸ್ವಾಗತ ಭಾಷಣ ಮಾಡಿದರು. ಕರಾವಳಿ ಲೇಖಕಿಯರ ಅಧ್ಯಕ್ಷೆ ಸಾರಾ ಅಬೂಬಕ್ಕರ್‌ರವರು ವಂದನಾರ್ಪಣೆ ಮಾಡಿದರು. ಪ್ರೊ॥ ವಿ. ಬಿ. ಮೊಳೆಯಾರ, ಲೀಲಾವತಿ ಎಸ್. ರಾವ್ ಮತ್ತು ಚಂದ್ರಕಲಾ ನಂದಾವರ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆಗಳ ಸಾಹಿತಿಗಳು ಸಭೆಯಲ್ಲಿ ಹಾಜರಿದ್ದು, ಉಪಯುಕ್ತ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮಹಿಳಾ ಆಯೋಗ ಮತ್ತು ಮಂತ್ರಿಗಳು

ರಾಷ್ಟ್ರೀಯ ಮಹಿಳಾ ಆಯೋಗ ಅಸ್ತಿತ್ವಕ್ಕೆ ಬಂದು ಆಗಲೇ ನಾಲ್ಕು ವರ್ಷಗಳಾಗಿವೆ. ಹಾಗೆಯೇ ವಿವಿಧ ರಾಜ್ಯಗಳಲ್ಲೂ ತಮಿಳುನಾಡು, ಮಹಾರಾಷ್ಟ್ರ ಮುಂತಾದ ಕಡೆಗಳಲ್ಲೆಲ್ಲಾ ಮಹಿಳಾ ಆಯೋಗಗಳು ರಚಿತಗೊಂಡು ಅಸ್ತಿತ್ವಕ್ಕೆ ಬಂದಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಮಹಿಳಾ ಆಯೋಗ ರಚಿಸಲಿರುವ ಸುದ್ದಿ ಕೆಲವು ತಿಂಗಳುಗಳ ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಸುದ್ದಿ ಪ್ರಕಟವಾದೊಡನೆ ನಾವು ಕೆಲವು ಮಹಿಳಾ ಸಂಘಟನೆಗಳು ಜೊತೆಗೂಡಿ ಮಹಿಳಾ ಮತ್ತು ಶಿಶುಕಲ್ಯಾಣ ಇಲಾಖೆಯ ಮಂತ್ರಿಯನ್ನು ಭೇಟಿಮಾಡಿ, ಮಹಿಳಾ ಆಯೋಗ ರಚಿಸುವ ಮುನ್ನ ರಾಜ್ಯದಲ್ಲಿ ಕ್ರಿಯಾಶೀಲವಾಗಿರುವ ಮಹಿಳಾ ಸಂಘಟನೆಗಳೊಡನೆ ಚರ್ಚಿಸಬೇಕೆಂದು ಮನವಿ ಮಾಡಿಕೊಂಡೆವು. ನಮ್ಮ ಮನವಿಯನ್ನು ಗಮನಿಸಿದ ಸಚಿವೆಯು ಸರಿಯಾದ ಸಮಯದಲ್ಲಿ ಮಹಿಳಾ ಸಂಘಟನೆಗಳ ಜೊತೆ ಚರ್ಚಿಸುವುದಾಗಿ ಆಶ್ವಾಸನೆಯಿತ್ತರು.

ಈ ಘಟನೆ ನಡೆದು ತಿಂಗಳುಗಳೇ ಉರುಳಿದವು. ಸರ್ಕಾರವು ಮಹಿಳಾ ಆಯೋಗವನ್ನು ರಚಿಸಲು ಯಾವ ಮಹಿಳಾ ಸಂಘಟನೆಯೊಡನೆಯೂ ಚರ್ಚಿಸಲಿಲ್ಲ. ಆದರೆ ಈ ಮಧ್ಯೆ ಮಹಿಳಾ ಆಯೋಗವು ಕಾನೂನಾಗಿ ಒಪ್ಪಿತವಾಗು ಶಾಸನ ಸಭೆಯಲ್ಲಿ ಅಂಗೀಕಾರ ಮುದ್ರೆ ಪಡೆಯಿತೆಂಬ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ಸಂದರ್ಭದಲ್ಲೇ ಮಹಿಳಾ ಸಂಘಟನೆಗಳು ಮತ್ತೆ ಮಂತ್ರಿಗಳ ಭೇಟಿಗೆ ಪ್ರಯತ್ನಿಸಿತು. ಈ ವಿಷಯವಾಗಿ ಕಾನೂನು ಮಂತ್ರಿಯನ್ನು ಭೇಟಿಯಾದಾಗ ಬಿಲ್ ಪಾಸಾಗಿದೆ ; ಎಲ್ಲ ಮುಗಿದು ಹೋಗಿದೆ. ಹೀಗಿರುವಾಗ ನಿಮ್ಮ ಮಧ್ಯಸ್ತಿಕೆಯಿಂದ ಪ್ರಯೋಜನವಾದರೂ ಏನು ? ಎನ್ನುವ ಧೋರಣೆ, ಮಹಿಳಾ ಆಯೋಗವನ್ನು ಕುರಿತು ಇರಲಿ, ಮಹಿಳೆಯರನ್ನು ಕುರಿತು ಈ ಮಂತ್ರಿ

ಗಳಿಗಿರುವ ಧೋರಣೆ ನಿಜಕ್ಕೂ ಆತಂಕಕಾರಿಯಾದುದು. ಇಂತಹ ಚರ್ಚೆಗಳಲ್ಲಿ ಮಹಿಳೆಯರ ಸಲಹೆ ಕೇಳುವುದು ಅಪ್ರಸ್ತುತ ಎಂಬ ತೀರ್ಮಾನಕ್ಕೆ ಬಂದು ಬಿಟ್ಟಿರುವ ಕಾನೂನು ಮಂತ್ರಿ ಕೊಟ್ಟ ಕಾರಣ ''ನಾಲ್ವರು ಮಹಿಳೆಯರಿದ್ದರೆ ಆರು ಸಲಹೆ ಬರುತ್ತದೆ; ಒಮ್ಮತವಿರುವುದಿಲ್ಲ. ಆದ್ದರಿಂದ ನಾವೇ ಈ ಆಯೋಗದ ರಚನೆಯನ್ನು ಪೂರ್ತಿ ಮಾಡುತ್ತೇವೆ'' ಎಂಬ ದಾರ್ಷ್ಟ್ಯ ತೋರಿದ ಕಾನೂನು ಮಂತ್ರಿ ನಾಣಯ್ಯನವರನ್ನು ಭೇಟಿಯಾದ ನಮ್ಮ ನಿಯೋಗ ತೀವ್ರವಾಗಿ ಪ್ರತಿಭಟಿಸಿತು.

ನಂತರ ಮಹಿಳಾ ಕಲ್ಯಾಣ ಇಲಾಖೆಯ ಮಂತ್ರಿ ಬಿ.ಟಿ. ಲಲಿತಾನಾಯಕ್‌ರನ್ನು ಭೇಟಿಯಾದರೆ, ಅವರ ದೃಷ್ಟಿ ಮತ್ತೊಂದು ಧ್ರುವ. ಮಹಿಳಾ ಆಯೋಗಕ್ಕೆ ಸಂಬಂಧಪಟ್ಟಂತೆ ಯಾವ ಕಾರ್ಯವೂ ನಡೆದಿಲ್ಲ. ಎಲ್ಲ ಮಂತ್ರಿ ಮಹೋದಯರೂ ವರ್ಗಾವಣೆಯ ಕಾರ್ಯದಲ್ಲಿ ತೊಡಗಿರುವುದರಿಂದ ಮಹಿಳಾ ಆಯೋಗ ರಚನೆಯಾಗುವ ಸಮಯ ಬಂದಾಗ ಮಹಿಳಾ ಸಂಘಟನೆಗಳನ್ನು ಸಂಪರ್ಕಿಸುತ್ತೇವೆ, ಎಂದು ಕೈ ತೊಳೆದುಕೊಂಡರು.

ಇವೆರಡರಲ್ಲಿ ಯಾವುದು ಸತ್ಯ ? ಸತ್ಯದ ಶೋಧನೆಗೆ ಈಗ ಮಹಿಳಾ ಸಂಘಗಳು ತೊಡಗಬೇಕಾಗಿದೆ.

ಪಂಚಾಯಿತಿ ರಾಜ್ಯದಲ್ಲಿ ಮಹಿಳೆಯರು

—ವಿನಾರಾ ಚಕ್ರವರ್ತಿ

ಸಿದ್ಧಾಂತದಲ್ಲಿ, ಕಾರ್ಯಾಚರಣೆಯಲ್ಲಿ ಮಾನವೀಯ ಗುರಿಗಳು ಮತ್ತು ಕಳಕಳಿಗೆ ಕೇಂದ್ರ ಸ್ಥಾನ ದೊರೆಯಬೇಕು. ಸರ್ಕಾರವು ಮಹಿಳೆಯರ ಮೂಲ ಸಮಸ್ಯೆಗಳತ್ತ ಗಮನಹರಿಸಬೇಕು. ಕಳೆದ ದಶಕಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅನುಭವಕ್ಕೆ ಬಂದಿರುವ ಬದಲಾವಣೆಗಳು ಹಾಗೂ ಅದಕ್ಕೆ ಒಳಗಾದ ಮಹಿಳೆಯರು ಅನುಭವಿಸಿರುವ ಕಷ್ಟಗಳು ಕೇಂದ್ರೀಕೃತ ನೀತಿಗಳಲ್ಲಿನ ಮೂಲಭೂತ ದುರ್ಬಲಾಂಶಗಳನ್ನು ಈಗ ಬೆಳಕಿಗೆ ತಂದಿವೆ. ಪಂಚಾಯ್ತಿ ರಾಜ್ಯದ ಕಾಯಿದೆಯ ಪ್ರಕಾರ ಕೊನೆಯಪಕ್ಷ ಮಹಿಳೆಯರು ಸ್ಥಳೀಯ ಆಡಳಿತದ ಎಲ್ಲ ಹಂತಗಳಲ್ಲೂ ಶೇಕಡ 33 ರಷ್ಟು ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗಿದೆ.

ಇಂದು ರಾಜ್ಯ ಸರ್ಕಾರಗಳಿಗೆ ಎದುರಾಗಿರುವ ಸವಾಲುಗಳು ಲೆಕ್ಕವಿಲ್ಲದಷ್ಟು ಹಾಗೆಯೇ ಅನೇಕ ರಾಜಕಾರಣಿಗಳು ವೈಯಕ್ತಿಕವಾಗಿ ಎದುರಿಸಬೇಕಾಗಿರುವ ಸವಾಲುಗಳೂ ಅಪಾರವಾಗಿವೆ. ಏಕೆಂದರೆ ಆಡಳಿತದ ಎಲ್ಲ ಸ್ತರಗಳಲ್ಲೂ ವಿಶೇಷವಾದ ಸ್ತ್ರೀಕೇಂದ್ರಿತ ತಿಳುವಳಿಕೆಯೊಂದು ಇದೆ ಎಂಬ ವಾಸ್ತವಾಂಶವನ್ನು ಅವರು ಒಪ್ಪಬೇಕಾಗಿ ಬಂದಿದೆ. ದೇಶಾದ್ಯಂತ ಮಹಿಳೆಯರು ಬಲವಾಗಿ ಧನಿಯೆತ್ತಿದ ನಂತರ ಪಂಚಾಯ್ತಿ ರಾಜ್ಯ ವ್ಯವಸ್ಥೆಯು ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ ನೀಡಲು ಸಿದ್ಧವಾಯಿತು. ಈ ವ್ಯವಸ್ಥೆ ಮಹಿಳೆಯರ ಮೂಲಭೂತ ಅವಶ್ಯಕತೆಗಳಿಗೆ ಮತ್ತು ಕಾಳಜಿಗಳಿಗೆ ಹೆಚ್ಚಿನ ಗಮನ ನೀಡಬೇಕೆಂಬುದನ್ನು ಎತ್ತಿ ಹಿಡಿಯುತ್ತದೆ. ಇದರ ಪರಿಣಾಮವಾಗಿ ಇದುವರೆಗೆ ನಿರ್ಲಕ್ಷ್ಯಕ್ಕೇ ಒಳಗಾಗಿರುವ ಆರೋಗ್ಯ, ವಸತಿ, ಶಿಕ್ಷಣ, ಭೂಹಕ್ಕುಗಳೇ ಮುಂತಾದ ಕ್ಷೇತ್ರಗಳಲ್ಲಿನ ತಮ್ಮ ಅಭಿವೃದ್ಧಿಗಾಗಿ ಮಹಿಳೆಯರು ಸ್ವತಃ ದೀರ್ಘಕಾಲೀನ ಯೋಜನಾ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ.

ಗ್ರಾಮ ಸ್ವರಾಜ್ಯದ ವಿಚಾರವನ್ನು ಮೊದಲು ಪ್ರಚಾರಕ್ಕೆ ತಂದವರು ಮಹಾತ್ಮಾ ಗಾಂಧಿ. ಈ ವಿಚಾರದ ಮುಂದುವರಿಕೆಗೆ ಕಾಣಿಕೆ ಸಲ್ಲಿಸಿದ್ದು ಜಯಪ್ರಕಾಶ ನಾರಾಯಣ ಅವರು. ದುರದೃಷ್ಟವೆಂದರೆ ಸರ್ಕಾರದಲ್ಲಿರುವವರು ಉದ್ದಕ್ಕೂ ಈ ವಿಚಾರವನ್ನು ಸ್ವಾಗತಿಸದೆ ಹೋದದ್ದು. ಏಕೆಂದರೆ ಅವರಿಗೆ ವಿಕೇಂದ್ರಿಕರಣದ ವಿಚಾರದ ಬಗ್ಗೆ ಹೆದರಿಕೆಯಿತ್ತು. ಅದರಲ್ಲೂ ಮಹಿಳೆಯರು ಆಡಳಿತದಲ್ಲಿ ಪಾಲುಗೊಳ್ಳುವ ಬಗ್ಗೆ ಅವರಲ್ಲಿ ತೀವ್ರ ವಿರೋಧವೇ ಇತ್ತು, ಕೊನೆಗೂ ಕಾಲ ಕೂಡಿಬಂತು. (ಪಂಚಾಯ್ತಿ ರಾಜ್ಯ) ದ ಠರಾವು ಮಂಜೂರಾಯ್ತು.

ಯಾವುದೇ ದೇಶದಲ್ಲಿ ಅಭಿವೃದ್ಧಿ ನೀತಿಗಳು ಆರೋಗ್ಯ–ವಿಶೇಷವಾಗಿ ತಾಯಂದಿರು ಹಾಗೂ ಮಕ್ಕಳ

ಆರೋಗ್ಯ, ಶಿಕ್ಷಣ, ಅದರಲ್ಲೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಉದ್ಯೋಗ, ವಸತಿ ಮುಂತಾದ ಆದ್ಯತೆ ಕ್ಷೇತ್ರಗಳತ್ತ ಹೆಚ್ಚಿನ ಒತ್ತು ನೀಡಬೇಕಾದ್ದು ಅಗತ್ಯ. ಈ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳುವುದಕ್ಕೆ ಒತ್ತು ನೀಡಬೇಕಾದ್ದು ಅತಿ ಮುಖ್ಯ ಹಾಗೂ ಅವಶ್ಯಕ, ಕೊನೆಯ ಪಕ್ಷ ಬೇರೆ ಬೇರೆ ರಾಷ್ಟ್ರೀಯ ವೇದಿಕೆಗಳಿಂದ ಈ ವಿಚಾರ ಘೋಷಿತ ವಾಗಿದೆ.

ಆದರೆ ಅನೇಕರು ಸ್ಥಳೀಯ ಸರ್ಕಾರಗಳಲ್ಲಿ ಮಹಿಳೆಯರು ಭಾಗವಹಿಸುವುದರ ಬಗೆಗಿನ ಈ ಘೋಷಣೆಯನ್ನು ಸಾಂಕೇತಿಕ ವಾಗಾಡಂಬರ ಮಾತ್ರ ಎಂದೇ ತಿಳಿದಿದ್ದಾರೆಂಬುದು ಇದುವರೆಗೆ ಹೆಚ್ಚು ಸ್ಫುಟವಾಗುತ್ತ ಬಂದಿದೆ. ಹಿಂದೆ ಹೇಳಿದ ಕಾಯಿದೆ ಮಂಜೂರಾತಿ ಪಡೆದ ನಂತರ ಕೆಲವು ಪತ್ರಿಕೆಗಳಂತೂ ಮಹಿಳೆಯರು ಈಗ 'ಚಾಲಕರ ಆಸನ'ಗಳನ್ನು ಅಲಂಕರಿಸಿದ್ದಾರೆಂದು ಬರೆದವು. ಆದರೆ ಅನೇಕ ಸಲ ಮಹಿಳೆಯರು ಚಾಲಕರಾಗಿ ದುಡಿಯಲು ಸಾಧ್ಯವಿರುವಾಗ ಕೂಡ ಅವರಿಗೆ ಅವಕಾಶ ದೊರೆಯುತ್ತಿಲ್ಲ ಎನ್ನುವುದು ವಾಸ್ತವ ಸಂಗತಿಯಾಗಿದೆ. ಪಂಚಾಯ್ತಿ ರಾಜ್ಯ ವ್ಯವಸ್ಥೆಯನ್ನು ಮೊದಲೇ ಜಾರಿಗೆ ತಂದಿದ್ದ ಕೆಲವು ರಾಜ್ಯಗಳಲ್ಲಿ ಮಹಿಳೆಯರೂ ಅದರಲ್ಲಿ ಪಾಲ್ಗೊಳ್ಳುವುದು ನಿರೀಕ್ಷಿತವಿದ್ದರೂ ಮಹಿಳಾ ಸದಸ್ಯರಿಗೆ ಸಭೆಗಳ ಬಗ್ಗೆ ಮಾಹಿತಿಯನ್ನೇ ನೀಡದಿರುವುದು, ಸಭೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕೂಡ ಅವರಿಗೆ ನೀಡದಿರುವುದು ಅಂಥ ಸ್ಥಳಗಳ ಸಮೀಕ್ಷೆಯಿಂದ ತಿಳಿದುಬರುತ್ತದೆ. ಒಂದು ವರದಿಯ ಪ್ರಕಾರ ಮಹಾರಾಷ್ಟ್ರದ ಅಂಬೇಜ್‌ಗೋಯಿ ಗ್ರಾಮದ ಯಮುನಾ ಬಾಯಿಯನ್ನು ಪಂಚಾಯ್ತಿ ಚುನಾವಣೆಯ ದಿನದಂದು ಬೇರೊಂದು ಹಳ್ಳಿಗೆ ಹೊತ್ತೊಯ್ದು, ಮಾರನೇ ದಿನ ವಾಪಸ್ಸು ಕರೆತರಲಾಗಿತ್ತು. ಆಕೆ ಅಡಿಗೆ ಮನೆಯಲ್ಲಿ ಕೆಲಸದಲ್ಲಿ ಮಗ್ನಳಾಗಿದ್ದಾಗ ಅವಳ ಗಂಡನನ್ನು ಹಿಡಿದುಕೊಂಡು ಹೋಗಿದ್ದರು. ಈ ವಿಷಯ ಆಕೆಗೆ ತಿಳಿದದ್ದೂ ಚುನಾವಣೆಯ ಫಲಿತಾಂಶ ಬಂದ ನಂತರವೇ. ಇದು ಕೇವಲ ಒಂದು ಉದಾಹರಣೆ. ದೀರ್ಘಕಾಲದ ಹೋರಾಟದ ನಂತರ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದುಕೊಂಡಾಗ, ತಮ್ಮ ಹಕ್ಕುಗಳನ್ನು ಚಲಾಯಿಸಲೂ ಧೈರ್ಯ ತೋರಿದಾಗ ಅವರನ್ನು ನಿಂದಿಸಿ ಆ ಹಕ್ಕುಗಳನ್ನು ಬಳಸದಂತೆ ಹೇಗೆ ತಡೆಯೊಡ್ಡಲಾಗುತ್ತದೆ ಎಂಬುದನ್ನು ತೋರುವ ಇಂಥ ಹಲವಾರು ನಿದರ್ಶನಗಳಿವೆ.

ಇಷ್ಟಾದರೂ ಈ ಕಾಯಿದೆಯ ಮೂಲಕ ಉಂಟಾಗಬಹುದಾದ ಬದಲಾವಣೆಗಳು ಅಪಾರ. ಈ ಕಾಯಿದೆಗೆ ಸ್ತ್ರೀಯರಲ್ಲಿ ಆಶಾಭಾವನೆ ಉಂಟುಮಾಡಬಲ್ಲುದಾದರೂ ಇದರ ಪ್ರಯೋಜನವನ್ನು ಅಂದಾಜು ಮಾಡುವ ಶಕ್ತಿ ಈಗ ಮಹಿಳೆಯರಿಗೆ ಇಲ್ಲ. ಏಕೆಂದರೆ ಬಹುಸಂಖ್ಯಾತ ಮಹಿಳೆಯರು ಅಜ್ಞಾನ ಹಾಗೂ ಅನಕ್ಷರತೆಯಲ್ಲಿದ್ದಾರೆ, ಆಡಳಿತದ ಅಭಿವೃದ್ಧಿಗೆ ಮಹಿಳೆಯರೂ ಪಾಲ್ಗೊಳ್ಳಬೇಕು ಎಂಬ ತಿಳುವಳಿಕೆ ನೀಡುವ ಬಗ್ಗೆ ಮಹಿಳಾ ಶಾಸಕರು ಮತ್ತು ರಾಜ್ಯ ಸರ್ಕಾರ ಇಬ್ಬರೂ ಚಿಂತಿಸಬೇಕಾಗಿದೆ. ಮಹಿಳೆಯರು ತಮ್ಮ ಸಾಮರ್ಥ್ಯಗಳನ್ನು ಪೂರ್ಣವಾಗಿ ಬೆಳೆಸಿಕೊಳ್ಳುವಂತೆ ಮಾಡಿ, ಆ ಮೂಲಕ ಅವರು ಸಮಾಜದ ದಕ್ಷ ಸದಸ್ಯರಾಗುವಂತೆ ಮಾಡಬಲ್ಲ ಪರಿಸರವೊಂದನ್ನು ರೂಪಿಸಬೇಕಾದ ಹೊಣೆ (ಮಹಿಳಾ ಶಾಸಕರು ಮತ್ತು ಸರ್ಕಾರ) ಇಬ್ಬರದೂ ಆಗಿದೆ. ಅಷ್ಟೇ ಅಲ್ಲ, ಸರ್ಕಾರವು ತನ್ನಿಷ್ಟ ಬಂದಂತೆ ಮಧ್ಯೆ ತಲೆ ತೂರಿಸಿ ಪಂಚಾಯ್ತಿಯ ಮಹಿಳಾ ಸದಸ್ಯರು ಕಾರ್ಯಕೈಗೊಳ್ಳುವ ಯತ್ನಗಳಿಗೂ, ಅವರ ಸಾಮರ್ಥ್ಯಗಳಿಗೂ ಅಡ್ಡಿಯುಂಟು ಮಾಡಬಾರದು.

ಮಹಿಳೆಯರು ತಮಗೆ ಸವಾಲಾಗದೆಯೇ ಆರೋಗ್ಯ, ಪ್ರಾಥಮಿಕ ಶಿಕ್ಷಣ, ವಸತಿ ಮುಂತಾದ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲರು ಎಂಬುದನ್ನು ಪುರುಷರು ಅರಿತುಕೊಳ್ಳಬೇಕಾಗಿದೆ. ಸ್ಥಳೀಯ ಹಾಗೂ ಸಾಮುದಾಯಿಕ ಕಾರ್ಯ ಚಟುವಟಿಕೆಗಳಲ್ಲಿ ಬೆಂಬಲಿಗರಾಗಿ ಮಹಿಳೆಯರು ತಮ್ಮ ಅತ್ಯುತ್ತಮ ಕಾರ್ಯಕ್ಷಮತೆ ತೋರಬಲ್ಲರು, ಕೋಮುಗಲಭೆಗಳ ಸಂದರ್ಭಗಳಲ್ಲಿ ಮಹಿಳೆಯರು ಕೈಗೊಳ್ಳುವ ಶಾಂತಿ ಸ್ಥಾಪನಾ ಪ್ರಯತ್ನಗಳು ಹಿಂಸಾಚಾರಗಳಲ್ಲಿ ಕೊನೆಗೊಳ್ಳಲಾರವು. ಬದಲಾಗಿ ಸಮಾಜದ ಅಭಿವೃದ್ಧಿಗೆ ದಾರಿ ತೋರಬಲ್ಲವು. ಕಳೆದ ದಶಕಗಳಲ್ಲಿನ ಮಹಿಳೆಯರ ಅನುಭವ ಹಾಗೂ ಈ ಹಿಂದೆ ಅವರು ಕಲಿತ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಪಾಠಗಳು ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಅವರಿಗೆ ಮಹತ್ವದ ಪಾತ್ರವೊಂದನ್ನು ಈಗ ಒದಗಿಸಬಲ್ಲವು. ಈ ಪರಿಸ್ಥಿತಿಯಲ್ಲಿ ಮಹಿಳೆಯರು ತಮ್ಮ ಸಮುದಾಯದ ಮತ್ತು ಗ್ರಾಮದ ಅಭಿವೃದ್ಧಿ

ಗಳನ್ನು ಮಹಾನವೀಯ ಮತ್ತು ಭೌತಿಕ ಸಂಪನ್ಮೂಲಗಳನ್ನು ಚಾಲನೆಗೊಳಿಸುವಲ್ಲಿ ತಮಗಿರುವ ಸಾಮರ್ಥ್ಯದ ವಿಸ್ತರಣೆಯೆಂದು ನೋಡಬಲ್ಲರು. ಅವರು ಈ ರೀತಿಯಲ್ಲಿ ಕಾರ್ಯಕ್ರಮಗಳನ್ನು ತಲುಪುವುದರಿಂದ ಜನಪರ ಕಾರ್ಯಕ್ರಮಗಳು ಎಷ್ಟು ಮುಖ್ಯ ಎಂಬದಕ್ಕೆ ಖಂಡಿತವಾಗಿ ಒತ್ತು ದೊರೆಯಬಲ್ಲದು. ಮಹಿಳೆಯರ ಈ ಪ್ರವೇಶವು ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಜನನೀತಿಗೆ ಮಾರ್ಗದರ್ಶಕವಾಗುವಂಥ ಸಮಗ್ರ ಪರಿಕಲ್ಪನೆಯೊಂದನ್ನು ಒದಗಿಸಬಲ್ಲದು.

ಒಟ್ಟಾರೆ, ಪಂಚಾಯಿತಿ ರಾಜ್ಯದಲ್ಲಿ ಮಹಿಳೆಯರ ಆಡಳಿತ ಪ್ರವೇಶವು ಗ್ರಾಮೀಣ ಸಮುದಾಯವು ಉಳಿಸಿಕಾಯ್ದುಕೊಳ್ಳಬಹುದಾದಂಥ ಪರಿಸರದ ದೃಷ್ಟಿಯಿಂದ ಸಮೃದ್ಧವಾದ ಬೆಳವಣಿಗೆಗಳನ್ನು ಹುಟ್ಟುಹಾಕುವತ್ತ ಗುರಿ ಹೊಂದಿರುತ್ತದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಎಷ್ಟು ಮಹತ್ವದ್ದು ಎಂಬುದನ್ನು ಈಗಾಗಲೇ ಹಲವಾರು ಸ್ಥಳಗಳಲ್ಲಿ ಗುರುತಿಸಲಾಗಿದೆ, ಬೆಂಬಲಿಸಲಾಗಿದೆ. ಈ ಅಂಶವು ಹೆಚ್ಚುಹೆಚ್ಚಾಗಿ ಎಲ್ಲ ಹಳ್ಳಿಗಳಲ್ಲೂ ಬಲಗೊಳ್ಳಬೇಕಾದು ಅತ್ಯವಶ್ಯಕ.

Reg. No. MAG (5) PRC. DEGL 036/89/87
BOOK-POST Periodicals
To

If undelivered please return to :
Jagruthi Mahila Adyayana Kendra
401, Vijay Tower, 2nd Main, RPC Layout
Vijayanagar, II Stage, Bangalore-560040